ಉಪನ್ಯಾಸ
ಗ್ರಂಥಮಾಲೆ

೧೫೨

ನಾರುಹುಣ್ಣು

ಡಾ|| ಎಸ್. ಎಸ್. ನರಸಣಗಿ
ಎಂ.ಎಸ್. (ಬಾಂಬೆ) ಎಫ್.ಐ.ಸಿ.ಎಸ್.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಿಸೆಂಬರ ೧೯೭೨

ಉಪನ್ಯಾಸ ಗ್ರಂಥಮಾಲೆ

೧೫೨

ನಾರುಹುಣ್ಣು

ಡಾ|| ಎಸ್. ಎಸ್. ನರಸಣಗಿ

ಎಂ. ಎಸ್. (ಬಾಂಬೆ) ಎಫ್. ಐ. ಸಿ. ಎಸ್.

ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ

ಡಿಸೆಂಬರ ೧೯೭೨

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ.ಎ.,ಎಲ್ ಎಲ್.ಬಿ.
ರಜಿಸ್ಟ್ರಾರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಡಿಸೆಂಬರ, ೧೯೬೨

ಪ್ರತಿಗಳು : ೫೦೦೦

ಬೆಲೆ : ೨೫ ಪೈಸೆ

ಮುದ್ರಕರು:
ಫ. ಶಿ. ಭಾಂಡಗೆ
ವಿದ್ಯಾವಾಹಿನಿ ವಿದ್ಯುನ್ಮುದ್ರಣ (**ಪುಸ್ತಕ ವಿಭಾಗ**)
ಗಂಗಾಪೂರಪೇಟ, **ಗದಗ**

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೆ ೧೫೧ ಪುಸ್ತಕಗಳು ಪ್ರಕಟವಾಗಿವೆ. ಅವು ಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ ಈ ಪುಸ್ತಕಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೮–೧೨–೭೨

ಎ. ಎಸ್. ಅಡಕೆ
ಕುಲಪತಿಗಳು

ನಿವೇದನೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದವರು ದಿನಾಂಕ ೬–೫–೭೧ ರಲ್ಲಿ ಏರ್ಪಡಿಸಿದ್ದ ಉಪನ್ಯಾಸ ಶಿಬಿರದಲ್ಲಿ ನಾರು ಬೇನೆಯನ್ನು ಕುರಿತು ಉಪನ್ಯಾಸ ಕೊಡುವ ಸದವಕಾಶವು ನನಗೆ ಪ್ರಾಪ್ತವಾಗಿತ್ತು. ಅಲ್ಲಿ ನಾನು ಕೊಟ್ಟ ಭಾಷಣದ ವಿಸ್ತೃತ ಸ್ವರೂಪವೇ ಈ ಪುಸ್ತಿಕೆ. ನಾರು ಬೇನೆಯು ವಿಶೇಷವಾಗಿ ಕಂಡುಬರುವ ಸುರಪುರ ತಾಲೂಕಿನ ದಕ್ಷಿಣಭಾಗ, ವಿಜಾಪುರ ಜಿಲ್ಲೆಯ ಪೂರ್ವಭಾಗ ಈ ಪ್ರದೇಶದ ಮಧ್ಯವರ್ತಿಯಾದ ನಾರಾಯಣಪುರದಲ್ಲಿಯೇ ಭಾಷಣ ಮಾಲೆಯನ್ನು ಏರ್ಪಡಿಸಲಾಗಿತ್ತು. ಭಾಷಣದಿಂದ ಬಹು ಜನಕ್ಕೆ ಉಪಯೋಗವಾಗಲು ಸಾಧ್ಯವಿರುವದಿಲ್ಲ. ಆದುದರಿಂದಲೇ ಈ ಪುಸ್ತಿಕೆಯನ್ನು ರೂಪಿಸುವ ಆವಶ್ಯಕತೆ ಉಂಟಾಯಿತು. ವ್ಯಾಸಂಗ ವಿಸ್ತರಣ ವಿಭಾಗದ ನಿರ್ದೇಶಕರಾದ ಶ್ರೀ ಚನ್ನವೀರ ಕಣವಿಯವರು ಬಹು ಕಾರ್ಯಕುಶಲರು, ದಕ್ಷರು. ನನ್ನ ವಿಲಂಬವನ್ನು ಲೆಕ್ಕಿಸದೆ ಆಗಾಗ ನನ್ನನ್ನು ಕೈ ಬರಹದ ಪ್ರತಿಯನ್ನು ಕಳುಹಿಸಿಕೊಡಲು ಒತ್ತಾಯಿಸುತ್ತಿದ್ದರು. ಅವರ ಸಹೃದಯದ ಒತ್ತಾಯವೂ ಈ ಗ್ರಂಥ ರೂಪುಗೊಳ್ಳಲು ಕಾರಣವಾಗಿದೆ.

ನನ್ನನ್ನು ಭಾಷಣಕ್ಕೆ ಆಮಂತ್ರಿಸಿ. ಆ ಭಾಷಣ ಚಿಕ್ಕ ಪುಸ್ತಕವಾಗಿ ರೂಪುಗೊಳ್ಳುವಂತೆ ಸ್ನೇಹದ ನೆರವನ್ನು ಕೊಟ್ಟುದ-ಕ್ಕಾಗಿ ನಿರ್ದೇಶಕರಿಗೂ ಇನ್ನುಳಿದ ಕಾರ್ಯಸಿಬ್ಬಂದಿಗೂ ನಾನು ಋಣಿಯಾಗಿದ್ದೇನೆ.

ಈ ಕಿರು ಹೊತ್ತಿಗೆಯನ್ನು ಬರೆಯುವಾಗ ಪ್ರೊ. ಪಿ. ವ್ಹಿ. ಮಲ್ಲಾಪುರ ಮತ್ತು ಶ್ರೀ. ಎ. ಕೆ. ರಾಮೇಶ್ವರ ಇವರು ಸಕಾಲದಲ್ಲಿ ಸಹಾಯ ನೀಡಿದ್ದಕ್ಕಾಗಿ ಅವರನ್ನು ಇಲ್ಲಿ ನೆನೆಸದೆ ಇರಲಾರೆ.

ಬಸವನಿವಾಸ

ಕಲಬುರ್ಗಿ ಡಾ|| ಎಸ್. ಎಸ್. ನರಸಣಗಿ

ವಿಜಯದಶಮಿ ೧೯೭೨.

ಪರಿವಿಡಿ

ಮೊದಲ ಮಾತು

ಧರ್ಮ ಸಾಧನೆಗೆ ದೇಹವು ಪ್ರಥಮ ಸಾಧನ ಎಂದ ಹೇಳಿರುತ್ತಾರೆ. ಈ ಮಾತು ಸತ್ಯವಾದುದು. ದೇಹವನ್ನು ಆಶ್ರಯಿಸಿಕೊಂಡೇ ಪ್ರಾಣ, ಆತ್ಮ, ಮನಸ್ಸು, ಕ್ರಿಯಾಶಕ್ತಿ ಗಳು ತಮ್ಮ ಪ್ರಭಾವವನ್ನು ಬೀರಲಿಕ್ಕೆ ಸಾಧ್ಯವಿದೆ. ಇದಿಲ್ಲ ದಿದ್ದರೆ ಈ ಯಾವ ಶಕ್ತಿಗೂ ನೆಲೆಯಿಲ್ಲ. ಈ ಕಾರಣದಿಂದಲೇ ಶರಣ-ಸಂತರು ದೇಹವನ್ನು ದೇವಾಲಯವೆಂದು– ಕರೆದಿದ್ದಾರೆ. ಜೀವದೇವನ ಆಶ್ರಯ ಸ್ಥಾನವಾದ ಈ ದೇಹ ಗಟ್ಟಿಮುಟ್ಟಾಗಿ ಬೇಕು, ನಿರೋಗಿಯಾಗಿರಬೇಕು. ಆಗ ಏನನ್ನಾದರೂ ಮಾಡಲ ಸಾಧ್ಯವಾಗುತ್ತದೆ. ಆದುದರಿಂದ ದೇಹವನ್ನು ಕಡೆಗಣಿಸಲ ಸಾಧ್ಯವಿಲ್ಲ.

ಮಾನವನ ಹುಟ್ಟಿನೊಂದಿಗೆ ರೋಗ–ರುಜಿನಗಳೂ ಜನ ತಾಳಿ ಬಂದಿವೆ. ಪ್ರಕೃತಿಗೆ ವಿರುದ್ಧವಾದಾಗಲೆಲ್ಲ ವಿಕೃತಿ. ರೋಗ ನಮ್ಮ ದೇಹಕ್ಕೆ ಅಂಟಿಕೊಳ್ಳುತ್ತದೆ. ಹೀಗೆ ಅಂಟಿಕೊಳ್ಳುವ ಬೇನೆಗಳನ್ನು ಇಷ್ಟೇ ಎಂದು ಹೇಗೆ ಹೇಳುವುದು ? ಹಾಸ್ಯಕ್ಕಾ 'ಔಷಧಿಗಳು ಹೆಚ್ಚಾದಷ್ಟೂ ರೋಗಗಳು ಹೆಚ್ಚಾಗಹತ್ತಿವೆ' ಎಂದು ಈಗ ಹೇಳುತ್ತಿರುವುದುಂಟು. ಅದು ಏನಿದ್ದರೂ ಅನೇ ರೋಗಗಳಿಗೆ ಹೊಸ ಹೊಸ ಬಗೆಯ ನಿದಾನ, ಚಿಕಿತ್ಸೆಗಳನ್ನು

ಮುಂದುವರಿಯುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ ನೀಡಲು ಸಾಧ್ಯವಾಗುತ್ತಿದೆ. ವೈದ್ಯಕೀಯ ವಿದ್ಯೆ, ಜ್ಞಾನ, ಉಪಕರಣ, ತರಬೇತು ಮೊದಲಾದ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿಯಾಗ ತೊಡಗಿದೆ.

ವೈದ್ಯಶಾಸ್ತ್ರದಲ್ಲಿ ಭಾರತ ಬಹು ಪುರಾತನ ಕಾಲದಲ್ಲಿಯೆ ಪ್ರಪಂಚದಲ್ಲಿ ಪ್ರಖ್ಯಾತವಾಗಿತ್ತು ಎಂದು ನಾವು ಹೇಳುತ್ತೇವೆ. ಆಯುರ್ವೇದ ಶಾಸ್ತ್ರ ಭಾರತವು ಪ್ರಪಂಚಕ್ಕೆ ನೀಡಿದ ಕೊಡುಗೆ ಎಂದೂ ಹೇಳುವಷ್ಟು ಅದರ ಹೆಚ್ಚಳವಿದೆ. ಆದರೆ ಕಾಲನ ಆಘಾತ ದಲ್ಲಿ ಆಯುರ್ವೇದವು ತನ್ನ ಔನ್ನತ್ಯವನ್ನು, ಜನಪ್ರಿಯತೆ ಯನ್ನು ಕಳೆದುಕೊಳ್ಳಬೇಕಾಯಿತು. ಆಧುನಿಕ ಭಾರತದಲ್ಲಿ ವೈದ್ಯಕೀಯ ವಿದ್ಯೆಯನ್ನು ಪಾಶ್ಚಿಮಾತ್ಯ ತತ್ವ ಬೆಳವಣಿಗೆ, ಪರಿ ಣಾಮಗಳ ತಳಹದಿಯ ಮೇಲೆ ಕಲಿಯುವಂತಾಗಿ ಅದು ಹೆಚ್ಚು ಜನಪ್ರಿಯವಾಗಿ ತನ್ನ ಪ್ರಖ್ಯಾತಿಯನ್ನು ಸ್ಥಾಪಿಸಿದೆ. ಭಾರತೀಯ ಸಂಸ್ಕೃತಿ, ಪದ್ಧತಿಗಳಲ್ಲಿ ತಿಳುವಳಿಕೆಯನ್ನಿರಿಸಿ ಕೊಂಡು ಪಾಶ್ಚಿಮಾತ್ಯ ಮಾದರಿಯ ವೈದ್ಯಶಾಸ್ತ್ರವನ್ನು ಓದಿ ರುವ, ಓದುತ್ತಿರುವ ಇಂದಿನ ಅನೇಕ ತರುಣ-ತರುಣಿಯರಿಗೆ ಅನೇಕ ಸಲ ಪಾಶ್ಚಾತ್ಯ ಹಾಗೂ ಭಾರತೀಯ ವೈದ್ಯವಿಧಾನದ ತುಲನಾತ್ಮಕ ಅಭ್ಯಾಸ, ಅನುಸರಣೆ ಕುತೂಹಲಕಾರಿಯಾಗಿ ರುವುದರಲ್ಲಿ ಸಂದೇಹವಿಲ್ಲ. ಅತ್ಯಂತ ಮುಂದುವರಿದ ಇಂದಿನ ಪಾಶ್ಚಿಮಾತ್ಯ ಮಾದರಿಯ ರೋಗನಿದಾನ ಮತ್ತು ಚಿಕಿತ್ಸೆಗಳು ಭಾರತದ ವೈದ್ಯರಿಗೆ ಗೊತ್ತಿದ್ದವು ಎಂದು ಹೇಳುತ್ತಾರೆ. ಇಂಥ ವಿಷಯಗಳ ವಿವೇಚನೆಯೂ ಮನೋರಂಜಕವಾಗಿರುತ್ತದೆ;

ಜ್ಞಾನ ಪರಂಪರೆಯನ್ನು ಹೇಗೆ ಕಳೆದುಕೊಂಡೆವು ಎನ್ನುವುದನ್ನು ಚಿಂತಿಸಿ ವ್ಯಸನವೂ ಉಂಟಾಗುತ್ತದೆ.

ನಾನೊಬ್ಬ ಪಾಶ್ಚಾತ್ಯ ಮಾದರಿಯಲ್ಲಿ ವೈದ್ಯಶಾಸ್ತ್ರವನ್ನು, ಶಸ್ತ್ರ ಚಿಕಿತ್ಸೆಯ ಅಭ್ಯಾಸವನ್ನು ಮಾಡಿ ಪದವಿಗಳನ್ನು ಗಳಿಸಿದವ. ನಮ್ಮ ಸುತ್ತುಮುತ್ತಲಿನ ಜನಜೀವನದಲ್ಲಿ ಉಂಟಾಗುವ ರೋಗಗಳಿಗೆಲ್ಲ ಇದೇ ಮಾದರಿಯನ್ನನುಸರಿಸಿ ಚಿಕಿತ್ಸೆಯನ್ನು ನೀಡುವವ. ಆದರೂ ಕೆಲವೊಂದು ಸಲ. ನಮ್ಮ ಹಳ್ಳಿಯ ಚಿಕಿತ್ಸಾಕ್ರಮಗಳು ರೋಗವನ್ನು ವಾಸಿ ಮಾಡುವ ಕ್ರಿಯೆಯನ್ನು ನೋಡಿದಾಗ ನನಗೇ ಆಶ್ಚರ್ಯವಾಗುತ್ತದೆ. ಪ್ರಸ್ತುತ ನನ್ನ ಬರವಣಿಗೆಯಲ್ಲಿ 'ನಾರುಬೇನೆ' ಗೆ ಚಿಕಿತ್ಸಾಕ್ರಮವನ್ನು ವಿವರಿಸುವಾಗ ಆಯುರ್ವೇದ ಪದ್ಧತಿಯನ್ನು ಪ್ರಸಂಗಾನುಸಾರವಾಗಿ ತುಸು ಹೇಳಿರುತ್ತೇನೆ.

'ನಾರು ಬೇನೆ' ಭಾರತೀಯರನ್ನು ಕಾಡುವ ಸರ್ವ-ಸಾಮಾನ್ಯ ವ್ಯಾಧಿ. ನಾರು ಬೇನೆಯ ಕಾರಣ. ನಾರಿನ ಬೆಳವಣಿಗೆ. ಅದರ ಸ್ವರೂಪ ಪರಿಣಾಮ. ಚಿಕಿತ್ಸೆ ಮೊದಲಾದವುಗಳನ್ನು ಕುರಿತು ಮುಂದೆ ವಿವರಿಸಲಾಗುವದು.



ಚಿತ್ರ ೧.

ಗುದದ್ವಾರದ ಹತ್ತಿರದಲ್ಲಿದ್ದ ನಾರು (ಜಂತು) ತೆಗೆಯುವಾಗಿನ ಚಿತ್ರ



ಚಿತ್ರ ೨.

ಸವಡದ ಕೀಲು ಸೇರಿದ್ದ ನಾರು (ಜಂತು) ಎಳೆಯನ್ನು ತೆಗೆಯುವಾಗಿನ ಚಿತ್ರ



ಚಿತ್ರ ೩. ಮೊಣಕಾಲು ಕೀಲಿನೊಳಗೆ ದಪ್ಪಾದ ಸಂಧಿಸುವ ಪ್ಲೇಟ್ ಮತ್ತು ಕಾಸಿಗೆಯು ಎಳೆಯುಂತಿರುವ ನಾರ (ಜಂತ)ನ್ನು ತೋರುವ ಚಿತ್ರ




ಚಿತ್ರ ೪.

ಹವಡದ ಕೀಲಿನ ಮೇಲೆ ತ್ವಚೆಯ ಒಳಭಾಗದಲ್ಲಿದ್ದು ಕಾಣಿಸಿಕೊಳ್ಳುವ ನಾರು (ಜಂತು) ಹುಳು

ನಾರು ಜಂತಿನ ಜೀವಶಾಸ್ತ್ರ

ನಾರು ಜಂತು ದುಂಡು ಹುಳಗಳ ವಂಶಕ್ಕೆ ಸೇರಿದ ಜಂತುವಾಗಿರುತ್ತದೆ. ಇದು ದಾರದ ಎಳೆಯಂತೆ ಇರುವುದರಿಂದ ಇದಕ್ಕೆ 'ಫೈಲೇರಿಯಾ' ಎಂದು ಕರೆದರು. ಈ ಜಂತು (ಹುಳ) ಮೆಡಿನಾ (ಮದೀನಾ) ಸುತ್ತುಮುತ್ತಲಿನ ಪ್ರದೇಶದಲ್ಲಿ ಕಂಡುಬಂದದ್ದರಿಂದ ಇದಕ್ಕೆ ಫೈಲೇರಿಯಾ ಮೆಡಿನೆನ್‌ಸಿಸ್ ಎಂದು ಕರೆಯುಲಾಗುತ್ತಿತ್ತು. ಕ್ರಿ. ಶ. ೧೮೬೩ರಲ್ಲಿ ಬೆಸ್ಟನ್ ಎಂಬ ತತ್ವಜ್ಞಾನಿಯು ತಾರುಣ್ಯಾವಸ್ಥೆಗೆ ಬಂದ ಈ ಹೆಣ್ಣು ಹುಳವನ್ನು ವರ್ಣಿಸುವುದರಲ್ಲಿ ಮೊತ್ತಮೊದಲಿಗನು. ಕ್ರಿ ಶ. ೧೮೭೦ರಲ್ಲಿ ಫೆಡೆಸ್ಕೊ ಎಂಬಾತನು ಸೈಕ್ಲೋಪಗಳಲ್ಲಿ ಅಪೂರ್ಣ ಸ್ಥಿತಿಯಲ್ಲಿರುವ ಈ ಜಂತುವನ್ನು ಕಂಡುಹಿಡಿದನು.



ಬೆಳವಣಿಗೆ ಹೊಂದಿದ ಹೆಣ್ಣು ನಾರು ಜಂತು ನಾರುಬೇನೆಗೆ ಸಂಬಂಧಪಟ್ಟ ಗಾಯಗಳನ್ನುಂಟು ಮಾಡುತ್ತದೆ.

ಪುರುಷಜಂತು ಏನಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ ಪ್ರಾಯಶಃ ಅದು ಸಾಯುತ್ತದೆ. ನಾರುಜಂತಿನ ಜೀವನ ರಹಸ್ಯವು ತಿಳಿದು ಬಂದರೆ ಈ ಬೇನೆ ಹಾಗೂ ಈ ಬೇನೆ ಯಿಂದುಂಟಾಗುವ ಗಾಯಗಳು ಚೆನ್ನಾಗಿ ತಿಳಿಯುತ್ತವೆ.


ನಾರು ಜಂತಿನ ಬಾಹ್ಯರೂಪ-ರೇಖೆಗಳು:



ತಾರುಣ್ಯಾವಸ್ಥೆಯನ್ನು ಹೊಂದಿದ ಹೆಣ್ಣು ನಾರು ಜಂತು ಶಾವಿಗೆಯ ಎಳೆಯಂತೆ ಬೆಳ್ಳಗಾಗಿಯೂ, ನುಣುಪಾಗಿಯೂ ದುಂಡಾಗಿಯೂ ಇರುತ್ತದೆ. ಇದರ ಉದ್ದ ನಿರ್ದಿಷ್ಟವಿಲ್ಲ ಆದರೂ ಇದು ಅರವತ್ತರಿಂದ ನೂರಾಇಪ್ಪತ್ತು ಸೆಂ. ಮಿ. ಉದ್ದ ಬೆಳೆಯುವುದು. ಅದರ ದಪ್ಪ ೧ ರಿಂದ ೧.೫ ಮಿ. ಮೀ ಅದ ದೇಹದಲ್ಲಿ ಎರಡು ಗರ್ಭಕೋಶಗಳಿದ್ದು ಸುಮಾರು ಮೂರ ದಶಲಕ್ಷ ಸಣ್ಣ ಜೀವಾಣುಗಳಿರುತ್ತವೆ. ಜೀವಾಣುಗಳಿಗೆ ಚಪ್ಪಟೆ

ದಾದ ಶರೀರವಿರುತ್ತದೆ. ಒಂದು ತಲೆ ಮತ್ತು ಉದ್ದವಾದ ಬಾಲವಿರುತ್ತದೆ ಇದು ತಾಯಿಯ ದೇಹದಲ್ಲಿ ನಿರಂತರವಾಗಿ ಚಲಿಸುತ್ತಿರುತ್ತದೆ.

ಜೀವನ ಚಕ್ರ:



ಸೈಕ್ಲೋಪಗಳು ಹೊಕ್ಕು ತುಂಬುವ ಬಾವಿಗಳಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ನಾರುಹುಣ್ಣಿನ ಜೀವಾಣುಗಳು ಸೈಕ್ಲೋಪಿನಲ್ಲಿ ಸಹಜವಾಗಿ ಸೇರುತ್ತವೆ ಈ ಸೈಕ್ಲೋಪಗಳು ಕುಡಿಯುವ ನೀರಿನಲ್ಲಿ ಪ್ರವೇಶಿಸಿ ಮನುಷ್ಯನ ದೇಹದಲ್ಲಿ ನುಸುಳಿ ಬರುತ್ತವೆ ಕೆಲವರು ಹೊಕ್ಕು ತುಂಬುವ ಬಾವಿಯ ನೀರನ್ನು ಕುಡಿದರೂ ನಾರು ಬೇನೆ ಅಂಟದೆಯೇ ಇರಬಹುದು. ಇದಕ್ಕೆ ಮೂರು ಕಾರಣಗಳಿವೆ.

೧) ಜಠರಾಮ್ಲವು ಹೆಚ್ಚಾಗಿದ್ದರೆ ನಾರಿನ ಜೀವಾಣುಗಳನ್ನು ಹೊಂದಿದ ಸೈಕ್ಲೋಪಗಳಿಂದ ಶರೀರದ ಮೇಲೆ ಯಾವ ಪರಿಣಾಮವೂ ಆಗುವದಿಲ್ಲ.

೨) ನಾರು ಬೇನೆಗೆ ಕೆಲವರಲ್ಲಿ ನೈಸರ್ಗಿಕ ನಿರೋಧ ಶ
ಪ್ರಬಲವಾಗಿರುತ್ತದೆ.

೩) ಇನ್ನು ಕೆಲವು ಅಜ್ಞಾತ ಕಾರಣಗಳ ಮೂಲಕ ಕೆಲ
ವೊಂದು ಜನರು ಈ ಬೇನೆಗಳಿಂದ ಬಳಲುವುದಿಲ್ಲ.

ಸಣ್ಣ ಕರುಳಿನ ಒಳಭಾಗದಿಂದ ಜೀವಾಣುಗಳು ಉದ
ಪರಿವೇಷ್ಟನ ಪಟಲದ (ಪೆರಿಟೋನಿಯಂ) ಹಿಂಭಾಗದಲ್ಲಿ
ರುವ ಅಂಗಾಂಶಗಳಿಗೆ ಪ್ರತ್ಯಕ್ಷವಾಗಿಯಾಗಲೀ ಹಾಲ್ರಸನಾ
ಗಳ(ಲಿಂಪ್ಯಾಟಿಕ್) ಮೂಲಕ ಅಪ್ರತ್ಯಕ್ಷವಾಗಿಯಾಗಲೀ ಬರ
ತ್ತವೆ. ಜಠರಾಮ್ಲದಿಂದ ಸೈಕ್ಲೋಪದಲ್ಲಿದ್ದ ಜೀವಾಣುಗಳು ಸಣ್ಣ
ಕರುಳಿನಲ್ಲಿಯೂ ಮತ್ತು ಸಣ್ಣ ಕರುಳಿನ ಮುಂಭಾಗದಲ್ಲಿಯೂ
ಹೊರಬೀಳುತ್ತವೆ. ಜೀವಾಣುಗಳು (ಲಿಂಪ್ಯಾಟಿಕ್) ಹಾಲ್ರ
ನಾಳಗಳಲ್ಲಿ ವಾಸಿಸುತ್ತವೆಯೋ ಅಥವಾ (ಲಿಂಪ್‌ನೋಡ
ನಾಳ ಗ್ರಂಥಿ ಎಂಬ ಗಂಟುಗಳಲ್ಲಿ ವಾಸಿಸುತ್ತವೆಯೋ ಎಂಬುದ
ಇದುವರೆಗೆ ತಿಳಿದು ಬಂದಿಲ್ಲ. ಪಿರಿಟೋನಿಯಿಂದ ಹಿಂಬದಿಯಲ್ಲಿ
ರುವ ಅಂಗಾಂಶಗಳಲ್ಲಿ ಹೆಣ್ಣು ಮತ್ತು ಗಂಡು ಕ್ರಿಮಿಗಳ
ತಾರುಣ್ಯಾವಸ್ಥೆಯನ್ನು ಹೊಂದಿ ಅವೆರಡೂ ಸಂಯೋಗವಾ
ನಂತರ ಗಂಡು ಜಂತು ಸಾಯುತ್ತದೆ. ಗರ್ಭಧಾರಣ ಮಾಡಿ
ಹೆಣ್ಣು ನಾರು ಜಂತು ದೇಹದ ಹೊರ ಭಾಗಗಳ ಕಡೆ ಚಲಿಸ
ಚರ್ಮವನ್ನು ಪ್ರವೇಶಿಸುವುದಕ್ಕಿಂತ ಮುಂಚೆಯೇ ಅದ
ಗರ್ಭಕೋಶಗಳಲ್ಲಿರುವ ಜಂತುಗಳು ಬೆಳೆದು ದೊಡ್ಡವಾಗು
ತ್ತವೆ. ಹೆಣ್ಣು ಜಂತಿನ (ಹುಳದ) ಗರ್ಭಕೋಶದಲ್ಲಿರುವ

ಕ್ರಿಮಿಗಳು ಹೆಚ್ಚಾಗಿ ಗರ್ಭ-ಕೋಶಗಳು ಉಬ್ಬುವುದರಿಂದ ಹೆಣ್ಣು ಜಂತಿನ ಅನ್ನಕೋಶವು ಮುಚ್ಚುವುದು. ಹೀಗೆ ಅನ್ನ-ಕೋಶವು ಮುಚ್ಚಿದ ನಂತರ ಹೆಣ್ಣು ಜಂತಿನ ಆಹಾರ ಪೋಷಣೆಯು ಜೀವಘಟಕಗಳ ಮಧ್ಯದಲ್ಲಿರುವ ದ್ರವದಿಂದ ನಡೆಯುತ್ತದೆ.

ನಾರು ಜಂತಿನ ದುಷ್ಪರಿಣಾಮಕ್ಕೊಳಗಾದ ಶರೀರದ ಭಾಗವು ಹೊಕ್ಕು ತುಂಬುವ ಬಾವಿಗಳ, ಕೆರೆ-ಕಾಲುವೆಗಳ ಸಂಪರ್ಕ ಪಡೆದಾಗ ಜೀವಾಣುಗಳು ನೀರಿನಲ್ಲಿ ರಭಸದಿಂದ ಸೇರಿಕೊಳ್ಳುತ್ತವೆ ಈ ಜೀವಾಣುಗಳಿಗೆ ಈಸುವ ಸಾಮರ್ಥ್ಯ ಇಲ್ಲದ ಮೂಲಕ ಅವು ನೀರಿನ ತಳಕ್ಕೆ ಹೋಗುತ್ತವೆ. ನೀರಿನ ತಳ ಪ್ರದೇಶಕ್ಕೆ ಸೈಕ್ಲೋಪಗಳು ಈಸಿಹೋಗಿ ಜೀವಾಣುಗಳನ್ನು ನುಂಗಿ ಬಿಡುವವು. ಬೇಸಿಗೆಯ ಕಾಲಗಳಲ್ಲಿ ಕೆರೆ-ಕಾಲುವೆಗಳ ನೀರು ತಳಕ್ಕೆ ಹೋಗುವುದರಿಂದ ತಳದಲ್ಲಿಯೇ ಇರುವ ಸೈಕ್ಲೋಪಗಳು ಕುಡಿಯುವ ನೀರಿನ ಮುಖಾಂತರ ಮನುಷ್ಯನ ದೇಹದಲ್ಲಿ ಸಹಜವಾಗಿಯೇ ನುಸುಳಿಹೋಗಿ ಈ ಬೇನೆಯ-ನ್ನುಂಟುಮಾಡುತ್ತವೆ.

ಈ ಬೇನೆಯು ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕು ಮತ್ತು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕುಗಳಲ್ಲಿ ಫೆಬ್ರುವರಿಯಿಂದ ಅಗಸ್ಟ ತಿಂಗಳ ಮಧ್ಯಕಾಲದಲ್ಲಿ ವಿಶೇಷತಃ ಎಪ್ರಿಲ್- ಮೇ ತಿಂಗಳುಗಳಲ್ಲಿ ತನ್ನ ಹಾವಳಿಯನ್ನು ಹೆಚ್ಚಿಸುತ್ತದೆ.

ನಾರು ಬೇನೆಯ ಹರಡುವಿಕೆ:

ನಾರು ಬೇನೆಯು ನಮ್ಮ ದೇಶದ ಬಹುಭಾಗದಲ್ಲಿ ಹರಡುತ್ತಿದ್ದು ಅದು ಸರಳವಾಗಿ ತಡೆಗಟ್ಟುವಂತಹ ಬೇನೆಯಾಗಿದ್ದರೂ ಇದರ ವಿಷಯವಾಗಿ ಪ್ರಮಾಣ ಗ್ರಂಥಗಳು ಬರೆಯಲ್ಪಟ್ಟಿರುವುದಿಲ್ಲ. ಕ್ರಿ. ಶ. ೧೯೪೭ ರಲ್ಲಿ ಸ್ಟಾಲ್ ಎಂಬಾತನ ಹೇಳಿಕೆಯಂತೆ ಪ್ರಪಂಚದಲ್ಲಿ ೪೮ ದಶಲಕ್ಷ ರೋಗಿಗಳು ಈ ಬೇನೆಗೆ ತುತ್ತಾಗಿದ್ದಾರೆ ಏಶಿಯಾದಲ್ಲಿ ೧೩ ದಶಲಕ್ಷ. ಆಫ್ರಿಕಾದಲ್ಲಿ ೧೫ ದಶಲಕ್ಷ. ಯು. ಎಸ್. ಎಸ್. ಆರ್. ದಲ್ಲಿ ೩ ದಶಲಕ್ಷ ಎಂದು ಅವನು ಹೇಳುತ್ತಾನೆ. ಇಜಿಪ್ತದ ನೈಲ್ ನದಿಯ ಕೊಳದಲ್ಲಿ ಈ ಬೇನೆಯಿಂದ ಶೇಕಡಾ ಐವತ್ತರಷ್ಟು ಜನರು ಬಳಲುತ್ತಾರೆ. ಹಿಂದುಸ್ತಾನದಲ್ಲಿ ಕ್ರಿ. ಶ. ೧೯೨೫ರಲ್ಲಿ ಫೇರ್ಲೆ. ಕ್ರಿ. ಶ. ೧೯೩೨ ರಲ್ಲಿ ಮೂರ್ತಿ ಹಾಗೂ ಕ್ರಿ. ಶ ೧೯೬೨ ರಲ್ಲಿ ರಾವೆ ಎಂಬವರು ಇದರ ಪ್ರಮಾಣದಲ್ಲಿ ಜಂತಿನ ಹಬ್ಬುವಿಕೆಯ ಬಗ್ಗೆ ವಿಶೇಷವಾಗಿ ಸಂಶೋಧನೆ ಮಾಡಿದ್ದಾರೆ. ಕ್ರಿ ಶ. ೧೯೪೭ ರಲ್ಲಿ ಅಂದಾಜು ಮಾಡಿದಾಗ ೫ ರಿಂದ ೨೫ ದಶಲಕ್ಷ ರೋಗಿಗಳು ನಾರು ಬೇನೆಗೆ ತುತ್ತಾಗಿದ್ದರು. ಕ್ರಿ. ಶ. ೧೯೫೭ ರಲ್ಲಿ ಜಸವಂತಸಿಂಗ ಮತ್ತು ರಾಘವನ್. ಕ್ರಿ. ಶ. ೧೯೬೭ ರಲ್ಲಿ ಪಾಟ್ನಾಯಿಕ್ ಮತ್ತು ಕಪೂರ ಇವರು ೩೦೪ ಜಿಲ್ಲೆಗಳಲ್ಲಿ ಈ ರೋಗದ ವಿಶ್ಲೇಷಣೆಮಾಡಿ ೯೨ ಜಿಲ್ಲೆಗಳಲ್ಲಿ ಮಾತ್ರ ಈ ಬೇನೆಯ ಪ್ರಭಾವ ಅತಿಶಯವಾಗಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ರಾಜಸ್ಥಾನ. ಮಹಾರಾಷ್ಟ್ರ. ಓರಿಸಾ. ಮದ್ರಾಸ, ಉತ್ತರಪ್ರದೇಶ. ಹಾಗು ಆಂಧ್ರಗಳಲ್ಲಿ ಈ ಬೇನೆಯ ಪ್ರಭಾವ ಹೆಚ್ಚಾಗಿದೆ. ಕ್ರಿ. ಶ. ೧೯೬೯ ರಲ್ಲಿ ಸಿ. ಆರ್.


ಹಾಗೂ ಆರ್. ಎಂ. ರೆಡ್ಡಿಯವರು ಮತ್ತು ಅವರ ಸಹಪಾಠಿಗಳು ಕರ್ನೂಲು ಜಿಲ್ಲೆಯ ನಾಲ್ಕು ಹಳ್ಳಿಗಳಲ್ಲಿ ನಾರು ಬೇನೆಯ ಸರ್ವೆಮಾಡಿದರು. ೪% ರಿಂದ ೫೪% ರಷ್ಟು ಜನರು ಈ ರೋಗಕ್ಕೆ ತುತ್ತಾಗಿದ್ದರೆಂದು ಅಂಕಿ ಸಂಖ್ಯೆಗಳಿಂದ ಸಿದ್ಧಪಡಿಸಿದರು. ಹೊಕ್ಕು ತುಂಬುವ ಬಾವಿಯ ನೀರು ಕುಡಿಯುವ ಜನರು ಹೇರಳವಾಗಿ ಈ ನಾರು ಬೇನೆಗೆ ತುತ್ತಾಗಿದ್ದರೆಂದು ಅವರು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ ೧೭೫೯ ರೋಗಿಗಳಲ್ಲಿ ೬೦೭ ರೋಗಿಗಳು ಒಂದಕ್ಕಿಂತ ಹೆಚ್ಚು ನಾರು ಬೇನೆಯಿಂದ ಬಳಲಿದ್ದಾರಂತೆ!



ಗುಲಬುರ್ಗಾ ಜಿಲ್ಲೆಯ ಸುರಪುರ, ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕುಗಳಲ್ಲಿ ಈ ನಾರು ಬೇನೆಯ ಹಾವಳಿ ಅತಿಶಯವಾಗಿದೆ. ಇಲ್ಲಿಯ ಜನರು ಹೊಕ್ಕು ತುಂಬುವ ಬಾವಿಗಳ, ಕೆರೆ, ಹಳ್ಳಗಳ ಹೊಲಸು ನೀರು ಕುಡಿಯುತ್ತಾರೆ. ಹೊಕ್ಕು ತುಂಬುವ ಬಾವಿಗಳನ್ನು ಸೇದುವ ಬಾವಿಗಳನ್ನಾಗಿ ಪರಿ-

ವರ್ತಿಸಿದಾಗ ಈ ರೋಗ ಕಡಿಮೆಯಾಗುತ್ತದೆ. ನಾರು ಬೇನೆ ಸ್ತ್ರೀ-ಪುರುಷರಿಬ್ಬರಿಗೂ ಅಂಟಿಕೊಳ್ಳುತ್ತದೆ. ಆದರೆ ಮೂರು ವರುಷಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳಿಗೆ ಈ ಬೇನೆ ಅಂಟಿಕೊಂಡ ಉದಾಹರಣೆಗಳಿಲ್ಲ. ಬಹುಶಃ ಆ ಕೂಸುಗಳು ಹೊಲಸು ನೀರನ್ನು ಕುಡಿಯಲಿಕ್ಕಿಲ್ಲ. ಅದೇ ಕುಟುಂಬದಲ್ಲಿಯ ಪ್ರೌಢರು ಈ ರೋಗದಿಂದ ನರಳುವ ಉದಾಹರಣೆಗಳಿಗೇನೂ ಕೊರತೆಯಿಲ್ಲ. ಕುಟುಂಬದಲ್ಲಿಯ ಜನರು ಈ ಪ್ರಕಾರದ ಹೊಲಸು ನೀರು ಕುಡಿದರೆ ಎಲ್ಲರಿಗೂ ಈ ರೋಗ ಅಂಟದೇ ಬಿಟ್ಟೀತೇ?

ದೇಹದ ವಿಭಿನ್ನ ಸ್ಥಳಗಳಿಂದ ನಾರು ಜಂತಿನ ಉಗಮ:



ಕೆಲವರು ಹೊಲಸು ನೀರು ಕುಡಿದವರೂ ಈ ರೋಗದಿಂದ ಹೇಗೆ ಪಾರಾಗಿದ್ದಾರೆಂಬುದು ಇನ್ನೂ ಒಡೆಯಲಾಗದ ಒಗಟಾಗಿದೆ. ನಾರುಜಂತು ಕಾಲು, ಪಾದ ಹಾಗು ಪಾದದ ಸಂದುಗಳಲ್ಲಿ ಅವತರಿಸುತ್ತದೆ. ಮತ್ತೆ ಈ ನಾರುಜಂತು ಅಂಡಕೋಶ, (ಸ್ಕ್ರೋಟಮ್) ವೀರ್ಯ ನಾಳಗಳ (ಸ್ಪರ್ಮ್ಯಾಟಿಕ್ ಕಾರ್ಡ್) ಮೂಲಕ ಮೊಳಕಾಲಿನ ಸಂದುಗಳ ಮೂಲಕವೂ ಕಾಣಿಸಿಕೊಳ್ಳುತ್ತದೆ ಕಂಕುಳ, ನಾಲಿಗೆ. ಕಣ್ಣಿನ ರೆಪ್ಪೆಗಳು. ಯೋನಿ ಮತ್ತು ಹೊಟ್ಟೆಯ ಒಳಭಾಗದಿಂದಲೂ ನಾರು ಜಂತು ಕಾಣಿಸಿಕೊಳ್ಳುವ ಉದಾಹರಣೆಗಳಿವೆ. ಏಕಕಾಲದಲ್ಲಿ ಒಬ್ಬ ಮನುಷ್ಯನು ಒಂದಕ್ಕಿಂತ ಹೆಚ್ಚು ನಾರುಗಳಿಂದ ಬಳಲುವ ಸಂಭವವೂ ಇಲ್ಲದಿಲ್ಲ. ಕ್ರಿ. ಶ. ೧೯೫೯ ಎಪ್ರಿಲ್-ಮೇ ತಿಂಗಳುಗಳಲ್ಲಿ ಒಬ್ಬ ರೋಗಿ ಏಕಕಾಲದಲ್ಲಿ ಅರವತ್ತು ನಾರುಗಳಿಂದ ಬಳಲಿದ್ದನ್ನು ಕಣ್ಣಾರೆ ಕಂಡ ಉದಾಹರಣೆಗಳಿವೆ. ಈ ಅರವತ್ತು ನಾರು ಜಂತುಗಳಲ್ಲಿ ಒಂದು ನಾಲಿಗೆಯಿಂದ ಬಂದರೆ ಮತ್ತೊಂದು ಜನನೇಂದ್ರಿಯದಿಂದ ಬಂದಿತು! ೨೫% ರಿಂದ ೩೦% ರೋಗಿಗಳು ಒಂದಕ್ಕಿಂತ ಹೆಚ್ಚು ನಾರುಗಳಿಂದ ಬಳಲಿದ್ದುಂಟು. ಫೆಬ್ರುವರಿಯಿಂದ ಆಗಸ್ಟ್‌ವರೆಗೆ ಅದರಲ್ಲಿಯೂ ವಿಶೇಷವಾಗಿ ಎಪ್ರಿಲ್ ಮೇ ತಿಂಗಳುಗಳಲ್ಲಿ ಈ ರೋಗದ ಹಾವಳಿ ಅತಿಶಯವಾಗಿರುತ್ತದೆ. ಬೇರೆ ಋತುಗಳಲ್ಲಿಯೂ ಆಕಸ್ಮಿಕವಾಗಿ ಈ ರೋಗ ಕಂಡು ಬರುತ್ತದೆ. ಹಮಾಲರು. ಕೂಲಿಕಾರರು. ಶ್ರಮಜೀವಿಗಳು ಈ ರೋಗಕ್ಕೆ ತುತ್ತಾಗುವುದು ಹೆಚ್ಚಾಗಿ ಕಂಡು ಬಂದಿದೆ. ಇವರು ನಿಷ್ಕಾಳಜಿಯಿಂದ ಸಿಕ್ಕಾಪಟ್ಟೆಯಾಗಿ ಹೊಲಸು

ನೀರನ್ನು ಕುಡಿಯುವುದೇ ಇದಕ್ಕೆ ಬಲವಾದ ಕಾರಣವೆನ್ನಬಹುದು. ನಾರು ಜೇನೆಯಿಂದ ಬಳಲಿ ಸತ್ತವರ ಉದಾಹರಣೆಗಳಿಲ್ಲ. ಕ್ರಿ. ಶ. ೧೯೫೭ರಲ್ಲಿ ಪಾಟ್ನಾಯಿಕ್ ಮತ್ತು ಕಪೂರ ಇವರ ಹೇಳಿಕೆಯಂತೆ ಸರಾಸರಿ ಮರಣದ ಪ್ರಮಾಣವು ಒಂದು ವರ್ಷದಲ್ಲಿ ಒಂದು ಲಕ್ಷದಲ್ಲಿ ೦.೦೦೪ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ರೋಗದಿಂದ ದೇಹವು ಅಶಕ್ತವಾಗಿ ಕುರೂಪಗೊಂಡು ಉತ್ಸಾಹಹೀನವಾಗುವುದು ಖಚಿತ. ಸುರಪುರ ಮತ್ತು ಮುದ್ದೇಬಿಹಾಳ ತಾಲೂಕುಗಳ ಜನರು ನಾರು ಜೇನೆಯಿಂದ ಬಿಡುಗಡೆ ಹೊಂದಬೇಕಾದರೆ ಹೊಕ್ಕು ತುಂಬುವ ಬಾವಿಗಳೆಲ್ಲ ಸೇದುವ ಬಾವಿಗಳಾಗಿ ಪರಿವರ್ತನ ಹೊಂದಬೇಕು; ಅಂದಾಗ ಮಾತ್ರ ಕ್ಷೇಮ.

ನಾರು ಜಂತಿನ ರೋಗ ಲಕ್ಷಣ ಶಾಸ್ತ್ರ

ನಾರಿನ ಜಂತು ಸಾಂಕ್ರಾಮಿಕ ಸ್ವಭಾವವನ್ನು, ಆಕ್ರಮಣಕಾರಕ ಶಕ್ತಿಯನ್ನು, ರೋಗಾಭಿವೃದ್ಧಿ ಗುಣವನ್ನು ಹಾಗೂ ವಿಷಕಾರಕ ಪ್ರಭಾವವನ್ನು ಪಡೆದಿರುತ್ತದೆ. ರೋಗ ಪೀಡಿತ ಪ್ರದೇಶದಲ್ಲಿ ಈ ಗುಣಗಳು ಇನ್ನೂ ಹೆಚ್ಚಿನ ಸಾಂಕ್ರಾಮಿಕ ಶಕ್ತಿಯಿಂದ ಕೂಡಿರುವವು. ಕರುಳಿನ ಒಳನಾಳ ಪ್ರದೇಶದಿಂದ ಕೆಳಗಿನ ಬಹಿರ್ ಪ್ರದೇಶಕ್ಕೆ ಇದು ಬರುವುದರಲ್ಲಿಯೇ ನಾವು ಇದರ ಆಕ್ರಮಣಶೀಲ ಗುಣವನ್ನು ಕಂಡುಕೊಳ್ಳಬಹುದಾಗಿದೆ. ಬೇರೆ ಬೇರೆ ಬಗೆಯ ಅನೇಕ ವ್ರಣಗಳು ನಾರಿನ ರೋಗಕಾರಕ ಶಕ್ತಿಯನ್ನು ವ್ಯಕ್ತಪಡಿಸುತ್ತವೆ. ರೋಗದ ಪ್ರಥಮ ಲಕ್ಷಣಗಳ ಕಾಣುವಿಕೆಯೇ ಬೇನೆಯ ವಿಷಕಾರಕ ಪ್ರಭಾವವನ್ನು ತಿಳಿಸುತ್ತದೆ. ನೀರಿನ ಸಂಪರ್ಕದಲ್ಲಿರುವ ತ್ವಚೆಯು ವ್ರಣಗಳ ಮೂಲಕ ಹೊರಹಾಕುವ ಮರಿಜಂತುಗಳ ಸಂತಾನದ ಮೇಲಿಂದ ಹೆಣ್ಣು ಜಂತಿನ ಜೀವನದ ಅವಧಿಯನ್ನು ಖಚಿತ ಪಡಿಸಿಕೊಳ್ಳಬಹುದಾಗಿದೆ. ತೇವಗೊಂಡಿರುವ ಗುಣವೇ ಮುಂದೆ ಬರಿಗಾಲಿನಲ್ಲಿ ಅಡ್ಡಾಡುವ ಹಳ್ಳಿಯ ಜನಗಳ ಕಾಲು ಮತ್ತು ಪಾದಗಳ ಭಾಗಗಳಲ್ಲಿ ನಾರುಹುಣ್ಣಾಗುವುದಕ್ಕೆ ಒಯ್ಯುತ್ತದೆ. ಬಾಯ್ಡ್ (೧೯೬೧) ನು ಹೇಳುವುದೇನಂದರೆ: ನಾರಿನ ಜಂತು ಅಂಗಾಲಿನ ಮೇಲೆ ಕಾಣಿಸಿಕೊಳ್ಳುತ್ತದೆ. ಭಾರವನ್ನು ಹೊರುವ

ಅಂಗಾಲಿನ ಅಂಥ ಭಾಗದಲ್ಲಿ ಒಂದೂ ನಾರನ್ನು ಮಾತ್ರ ನಾವು ಕಂಡುದಿಲ್ಲ. ನಾರಿನ ಜಂತು ದೇಹದ ಭಾರದಿಂದ ಜಜ್ಜಿಹೋಗ-ಬಹುದಾದಂಥ (ಜಾಗದ) ಆಶ್ರಯದಿಂದ ತಪ್ಪಿಸಿಕೊಳ್ಳುತ್ತದೆ. ದ್ರವದಿಂದ ಕೂಡಿದ ದೇಹದ ಭಾಗಗಳನ್ನು ಇದು ಆಕಲ್ಪಿತವಾಗಿ ಸೇರುವುದರಿಂದ ಜಂತಿನ ತೇವ ಗುಣಕ್ಕೆ ಅಪವಾದವೆಂದು ಹೇಳಬಹುದಾಗಿದೆ.

ಜಂತು ಶಕ್ತಿಯುತ ಮತ್ತು ಚುರುಕಾದ ಚಲನಶಕ್ತಿಯನ್ನು ತೋರಿಸುತ್ತದೆ. ಆಶ್ರಯ ಪಡೆದವನ ದೇಹದಲ್ಲಿ ಆಳದಿಂದ ಮೇಲ್ಭಾಗಕ್ಕೆ ಬಹು ಉದ್ದಕ್ಕೆ ಚಲಿಸಬಲ್ಲ ಶಕ್ತಿಯನ್ನು ಕೊಡುವ ಒಂದು ಬಗೆಯ ದ್ರವವನ್ನು ದೇಹದಲ್ಲಿ ಈ ಜಂತು ಪಡೆದಿರುವುದು. ಈ ವಿಷಕಾರಿ ದ್ರವವು ಹೊರ ಹಾಯಲಿರುವ ನಾರು ಜಂತಿನ ತಲೆಯ ಸುತ್ತಲೂ ಗುಳ್ಳೆಯಾಗಲು ಸಹಾಯಕವಾಗುವ ತ್ವಚೆಯು ಕರಗಿ ಹೋಗುವಂತೆಯೂ ಸಹಾಯ ಮಾಡುತ್ತದೆ. ರೋಗಗ್ರಸ್ತನ ದೇಹದ ಆಳ ಭಾಗದಿಂದ ಮೇಲ್ಭಾಗಕ್ಕೆ ಬರುವ ಜಂತಿನ ಕ್ರಿಯೆ ಲಕ್ಷಣರಹಿತವಾಗಿ ಸುಮ್ಮನೆ ನಡೆಯುವುದು. ಈ ಸ್ಥಿತಿಯಲ್ಲಿಯ ಜಂತು ಒಳ-ಗೊಂಡಿರುವ ದ್ರವವು ಉರಿತವಲ್ಲದ ಅಥವಾ ಪರಿಣಾಮಕಾರಿ-ಯಲ್ಲದ ಘಟಕಗಳಿಂದ ಕೂಡಿದ್ದಾಗಿರುತ್ತದೆಂದು ನಾವು ಊಹಿಸಬಹುದಾಗಿದೆ. ಕ್ರಿಯಾಶೀಲ ನಾರು ಜಂತಿನ ಲಕ್ಷಣಗಳೆಂದರೆ ಉರಿತ ಉಂಟಾಗುವುದು ಹಾಗೂ ನವೆ (ತಿಂಡಿ) ಪ್ರಾರಂಭವಾಗುವುದು. ನಾರು ಹುಳದಿಂದ ಹೊರಹೊಮ್ಮಿ ಬರುವ (ಇರಿಟಂಟ) ಉದ್ರೇಕಕಾರಕ ದ್ರವವು ಈ ಉರಿತ ಮತ್ತು

ತಿಂಡಿಗೆ ಕಾರಣ ವಿರಬಹುದು. ಶ್ರೀ ಜೆಲ್ಲಿಂಗ್ (೧೯೬೫) ಹಾಗೂ ಪ್ರಾಸ್ಪಸ್ ಬರ್ (೧೯೬೬) ಎಂಬವರು ನವೆ ಇರುವುದನ್ನು ಸೂಚಿಸಿ ತೋರಿಸಿದರು. ಫೆಯರ್‌ಲಿ ಮತ್ತು ಲಿಸ್ಟರ್ (೧೯೩೬) ಎನ್ನುವವರು ಮರಿ ಜಂತುಗಳು ನವೆ ಅಥವಾ ಉದ್ರೇಕಕಾರಿ ಕಾರಣವನ್ನು ನಿರ್ಮಾಣ ಮಾಡಿಕೊಳ್ಳುತ್ತವೆ ಎಂಬ ಜನಪ್ರಿಯ ತಿಳುವಳಿಕೆಯನ್ನು ತಪ್ಪೆಂದು ಸಾಧಿಸಿದರು

ಒಂದು ಜಾಗದಲ್ಲಿಯ ನಾರಿನ ವ್ರಣದ ತೀವ್ರತೆಯು ಬಹುತರವಾಗಿ ಜಂತು ಒಳಗೊಂಡಿರುವ ಉದ್ರೇಕಕಾರಿ ಶಕ್ತಿಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಈ ಪ್ರಮಾಣವೇ ಬಹು ದಿನ ಉಳಿಯಬಹುದಾದ ನಾರು ಬೇನೆಯ ಗಾಯದ ವೃದ್ಧಿ ಅಥವಾ ಕ್ಷಯವನ್ನು ತಿಳಿಯ ಬಲ್ಲದು. ಉದ್ರೇಕಗೊಳಿಸುವ ಶಕ್ತಿಯು ಅತ್ಯಂತ ಮಹತ್ವದ ಒಂದು ಲಕ್ಷಣವೆಂದರೆ ಅದರ ಕೆರಳಿಸುವ ಶಕ್ತಿ. ಅದರಲ್ಲಿಯೂ ಪ್ರಮುಖವಾಗಿ ಇನ್ನೂ ಮುಚ್ಚಿಕೊಂಡಿರುವ ಹಾಗೂ ಗಡ್ಡೆಯಂತಾಗಿ ರಸಿಕೆಯನ್ನು ಒರಿಸಬಹುದಾದ ವ್ರಣಗಳಲ್ಲಿಯದು. ಈ ಗಡ್ಡೆಯೊಳಗೆ ತಂತುರೂಪದಲ್ಲಿ ತುಂಬಿಕೊಂಡಿರುವ ಸ್ರಾವ ದ್ರವ್ಯವೇ. ನಾರು ಬೇನೆಯು ಎಷ್ಟು ಪ್ರಮಾಣದಲ್ಲಿ ಬೇರೂರಿದೆ ಎಂಬುದನ್ನು ನಿರ್ಧರಿಸುವುದು. ಈ ಸ್ರಾವ ದ್ರವ್ಯವೇ ದಪ್ಪವಾದ ಕೋಶ (ಚೀಲ) ವನ್ನು ತಯಾರಿಸುವುದು. ಸ್ನಾಯುವಿನಿಂದ ಹೊರಹೊರಟು ಬರುವ ಟೆಂಡನ್ ಎಂಬ ನರಗಳನ್ನು ಆಕುಂಚನಗೊಳಿಸುವುದು ಇದಲ್ಲದೆ ಸಂಧಿ ಹಿಡಿತ ಉಂಟು ಮಾಡುವುದು. ಹೃದಯದ ಸುತ್ತುಮುತ್ತಲಿನ ಪರದೆಯನ್ನು ಆಕುಂಚನ

ಗೊಳಿಸುವುದು. ಮತ್ತು ಮೂತ್ರನಾಳದ ಸುತ್ತು ಮುತ್ತಲೂ ಆಕ್ರಮಿಸಿ ಕುತ್ತಿಗೆ ಹಿಚುಕುವಂತೆ ಮಾಡುವುದರಿಂದ ಮೂತ್ರ ಪಿಂಡವು ಮಾತ್ರ ಕೋಶದಂತೆ ಆಗುತ್ತದೆ. ನಾರಿನ ಜಂತು. ಒಡೆದ ಹಾಗೂ ಒಡೆಯದಿರುವ ವ್ರಣ (ಗಡ್ಡೆ)ಗಳಲ್ಲಿ ಬೇರೆ ಬೇರೆಯಾಗಿ ವರ್ತಿಸುವುದು ಗಡ್ಡೆಯು ಒಡೆಯದಿರುವ ಮೊದಲು ಜಂತು ಸಾಪೇಕ್ಷವಾಗಿಯೂ, ಸ್ವತಂತ್ರವಾಗಿಯೂ ಇರುವುದು. ಹಾಗೂ ಈ ಅವಧಿಯಲ್ಲಿ ಜಂತನ್ನು ಶಸ್ತ್ರಕ್ರಿಯೆಯಿಂದ ಕೊರೆದು ತೆಗೆಯುವುದು ಸುಲಭ ವ್ರಣ ಒಡೆಯುತ್ತಲೇ ಜಂತು (ಒಳಗೆ) ಮಾಂಸ ಖಂಡವನ್ನು ಬಿಗಿಯಾಗಿ ಹಿಡಿದು ಕೊಳ್ಳುವುದು. ಇದರ ಇನ್ನೊಂದು ತುದಿಯ ಹತ್ತಿರ ಎರಡು ಮೊನಚಾದ ಕೊಂಡಿಯಂಥ ಅವಯವಗಳಿರುವವು. ಇವುಗಳ ಸಹಾಯದಿಂದಲೇ ಜಂತು ನಾಡಿಕೂಟದ ಮಾಂಸಖಂಡವನ್ನು ಕೊಂಡಿಯಂತೆ ಹಿಡಿಯುವುದು. ಜಂತನ್ನು ಹೊರಗೆಳೆದು ಒಮ್ಮೆಲೆ ಬಿಟ್ಟಾಗ ಅದು ಹಿಂದಕ್ಕೆ ನೆಗೆದು ಗಾಯದ ಒಳಗಡೆ ಸೇರುವುದು. ಭಯಂಕರವಾದ ರಭಸದಿಂದ ಹಿಂತಿರುಗಿ ಹೋಗುವ ಚಲನವಲನದ ಮೂಲಕ ಈ ಹುಳಕ್ಕೆ ಕ್ರೂರ ಜಂತು (ಡ್ರೆಗಾನ್) ಅಥವಾ ಅಗ್ನಿಸರ್ಪ (ಡ್ರೆಂಕೆಕ್ಯೂಲಸ್) ಎಂದು ಕರೆಯಲಾಯಿತು. ಒಡೆದ ನಾರಿನ ಗಾಯಗಳ ಮೇಲೆ ಏಕಾಣು ಕ್ರಿಮಿಗಳ ಇನ್ನೊಂದು ಬಗೆಯ ದಾಳಿಯು ತೀಕ್ಷ್ಣ ಉರಿತಕ್ಕೆ ಹಾಗೂ ಇನ್ನಿತರ ತೊಂದರೆಗಳಿಗೂ ಕಾರಣವಾಗುವುದು. ನಾರು ಹುಣ್ಣಿನ ವ್ರಣಗಳಾಗಬೇಕಾದರೆ ಏಕಾಣು ಕ್ರಿಮಿಗಳಿಗಿಂತಲೂ ನಾರು ಹುಣ್ಣಿನಿಂದ ಬಂದ ಉದ್ರೇಕಕಾರಕ ದ್ರವವು


ಮಹತ್ತ್ವವು. ಹೊರಗೆ ಕಾಣಿಸಿಕೊಂಡ ನಾರು ಹುಳದ ಮಾರ್ಗದ ಬುಡಕ್ಕೂ ಏಕಾಣು ಕ್ರಿಮಿಗಳಿಂದ ಸಣ್ಣ ಸಣ್ಣ ಕೀವದ ಗಂಟುಗಳು ಆಗುತ್ತವೆ. ಈ ಕೀವದ ಗಂಟುಗಳು ಆಗುವುದೊಂದನ್ನು ಬಿಟ್ಟರೆ ಏಕಾಣು ಕ್ರಿಮಿಗಳಿಂದ ನಾರು ಬೇನೆಯು ಜಡ್ಡಿನಲ್ಲಿ ಮತ್ತಾವ ತೊಂದರೆಯೂ ಆಗುವುದಿಲ್ಲ. ನಾರು ಹುಣ್ಣಿಗೆ ಮನುಷ್ಯನ ದೇಹದಲ್ಲಿ ಇರುವ ಪ್ರತಿರೋಧಕ ಶಕ್ತಿಯು ಇನ್ನೂ ಸಮರ್ಪಕವಾಗಿ ಗೊತ್ತಾಗಿಲ್ಲ. ಈ ಸಿಟ್ಟಿನಲ್ಲಿ ಅಥವಾ ಇಲ್ಲವೆಂದೇ ಹೇಳಬಹುದಾದ ಪ್ರತಿರೋಧಕ ಶಕ್ತಿಯಿರುತ್ತದೆ. ಇದರಿಂದಲೇ ಪದೇ ಪದೇ ನಾರು ಬೇನೆಯು ತೊಂದರೆ ನಮಗಾಗುತ್ತದೆ.


ನಾರಿನ ರೋಗ ಲಕ್ಷಣ ಶಾಸ್ತ್ರವನ್ನು ಪ್ರಮುಖವಾಗಿ ಮೂರು ಅಂಶಗಳಿಂದ ಅರ್ಥಮಾಡಿಕೊಳ್ಳಬಹುದಾಗಿದೆ.

೧) **ರೋಗದ ಲಕ್ಷಣ :—** ಗುಳ್ಳೆಯು ಒಳಗಿರುವ ಜಂತು (ನಾರು) ಹೊರಗೆ ಕಾಣಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲಿ ರೋಗಗ್ರಸ್ತ ವ್ಯಕ್ತಿಯ ದೇಹದಲ್ಲಿ ತುರಿಕೆ ಉಂಟಾಗುವುದು; ಚುರು ಚುರು ಎಂದಂತಾಗುವುದು; ಜ್ವರ, ತಲೆನೋವುಗಳು ಕಾಣಿಸಿಕೊಂಡು ವಾಂತಿ ಪ್ರಾರಂಭವಾಗುವುದು. ಹಾಗೂ ಹೈತಿಗೆಗಳು ಏಳುವವು. ರೋಗಿಯಿಂದ ರೋಗಿಗೆ ಈ ಲಕ್ಷಣಗಳು ಹೆಚ್ಚು ಕಡಿಮೆಯಾಗಬಹುದು. ಇನ್ನೂ ಕೆಲವರಿಗೆ ಈ ರೋಗ ಲಕ್ಷಣಗಳು ಇಲ್ಲದೆ ಇರಬಹುದು. ಇದೆಲ್ಲಕ್ಕೂ ಕಾರಣವೆಂದರೆ ಮುಂದಗಾಮಿಯಾಗಿರುವ ಅಲರ್ಜನ್.

೨) **ಉರಿತ** :– ನಾರು ಜಂತಿನ ದ್ರವರೂಪದಲ್ಲಿಯ ಚಲನ ವಲನ ಪ್ರಾರಂಭವಾಗಿ ಒಳಚರ್ಮ ಹಾಗೂ ಹೊರ ಚರ್ಮ ವನ್ನು ಬೇರ್ಪಡಿಸಿ ಮುಂದೆ ಗುಳ್ಳೆಯು ತಯಾರಾಗುವುದು. ಈ ಗುಳ್ಳೆಯು ಸುತ್ತಲೂ ಪ್ರಧಾನವಾದ ಉರಿತದ ಲಕ್ಷಣಗಳಿರು ತ್ತವೆ. ಇಡೀ ದೇಹಕ್ಕೆ ಸಂಬಂಧಿಸಿದ ಈ ಬೇನೆಯ ಲಕ್ಷಣ ವೆಂದರೆ ಈ ಯೋಸಿನೊಫಿಲ್ಸ ಎಂಬ ಶ್ವೇತ ಗೋಲಿಕಗಳು ೬% ರಿಂದ ೧೫% ರಷ್ಟು ಹೆಚ್ಚಾಗಬಹುದು. ಮ್ಯಾನಸನ್ ಬಾರ (೧೯೬೬) ಎಂಬವನ ಹೇಳಿಕೆಯಂತೆ ಗುಳ್ಳೆಗಳಲ್ಲಿಯ ದ್ರವವು ಅನೇಕ ಮರಿಹುಳಗಳನ್ನು ಒಳಗೊಂಡಿರುತ್ತದೆ. ಜೆಲ್ಲಿಂಗ್ (೧೯೬೫) ಎಂಬಾತನು ಗುಳ್ಳೆಯ ದ್ರವದಲ್ಲಿ ಈ ಯೋಸಿನೊ- ಫಿಲ್ಸ ಹಾಗೂ ನ್ಯೂಟ್ರೊಫಿಲ್ಸ ಎಂಬ ಶ್ವೇತ ಗೋಲಿಕಗಳ ಇರುವಿಕೆಯನ್ನು ವರ್ಣಿಸಿದ್ದಾನೆ. ಆದರೆ ನಾವು ಈ ವರೆಗೂ ಈ ದ್ರವದಲ್ಲಿ ಮರಿ ಕ್ರಿಮಿಗಳಿರುವುದನ್ನು ಕಂಡಿಲ್ಲ. ಗುಳ್ಳೆಯು ಒಡೆದು, ಸೋರುವ ವ್ರಣವಾಗಲಿ ಅಥವಾ ನಾಡಿ ಹುಣ್ಣಾಗಲಿ ಆಗುತ್ತದೆ. ನಾಡಿ ವ್ರಣವು ಸುತ್ತು ವರಿದ ಗಾಯದಂತೆ ಕಾಣು ವುದು. ಆಗಾಗ್ಗೆ ಕುಗ್ಗಿದ ತುದಿಯನ್ನು ಇದು ಒಳಗೊಂಡಿರು ತ್ತದೆ. ಜಂತು ಪೂರ್ಣ ಹೊರ ಬರುವ ವರೆಗೆ, ಕೈಗಳಿಂದ ತೆಗೆದೊಗೆಯುವವರೆಗೆ ಅಥವಾ ಔಷಧಗಳಿಂದ ಕೊಲ್ಲುವತನಕ ವ್ರಣವು ಅನೇಕ ವಾರಗಳ ವರೆಗೆ ಸ್ಥಿರವಾಗಿರುತ್ತದೆ. ನಾಡಿ ವ್ರಣ ಕ್ಕಿಂತ ಕೀವ ಬಸಿಯುವ ಹುಣ್ಣಿರುವುದೇ ಹೆಚ್ಚು. ಕೀವದ ಜೊತೆಗೆ ನೋವನ್ನುಂಟು ಮಾಡುವ ಗುಲಾಬಿ ವರ್ಣದ ಕಾಳು ಕಾಳಾದ ಮಾಂಸಖಂಡವೂ ಹೊರಬರುವುದು ಹಳೆಯ ಹುಣ್ಣಿಗೆ

ದಪ್ಪಗಿನ ಸ್ಪಷ್ಟವಾದ ದಂಡೆ ಇರುತ್ತದೆ. ಬಾಡಿದ ಹಾಸು ಇರುತ್ತದೆ. ಹಾಗೂ ತುಸು ಸೋರುವಿಕೆ ಕಾಣಿಸುತ್ತದೆ. ಒಮ್ಮೊಮ್ಮೆ ಹುಲುಸಾದ ಕಾಳು ಕಾಳಾದ ನಾಡಿಕೂಟಗಳು (Tissue) ಒಳಗಾದ ದಂಡೆಯನ್ನು ಹೊರಗೆಡಹುತ್ತವೆ.





ನಾರಿನ ಗಾಯವನ್ನು ಸೂಕ್ಷ್ಮದರ್ಶಕದ ಸಹಾಯದಿಂದ ಪರೀಕ್ಷಿಸಿದಾಗ ಅಲ್ಲಿ ದ್ರವ ಗೋಲಕಗಳು. ಏಕ ಮತ್ತು ಅನೇ-ಕಾಣುಗಳ ಬಿಳಿಯ ಗೋಲಕಗಳು ಇರುವುದು ಕಂಡುಬಂದಿದೆ. ಮುಚ್ಚಿರುವ ವ್ರಣದೊಳಗಿನ ರಸಿಕೆಯು ಗುಳ್ಳೆಯನ್ನು ರೂಪಿಸುವುದು. ಈ ಕುರು ಈಯೋಸಿನೊಫಿಲ್ಸಗಳನ್ನಾಗಲಿ ಅಥವಾ ಕ್ರಿಮಿಗಳನ್ನಾಗಲಿ (ಬ್ಯಾಕ್ಟೀರಿಯಾ) ಒಳಗೊಂಡಿರಲಿಲ್ಲ. ಇದಲ್ಲದೆ ಜೀವಾಣುರಾಶಿಗಳಲ್ಲಿ ದೇಹದ ರಚನೆಯಾಗಿರುವುದೂ ಗೊತ್ತಾಗಲಿಲ್ಲ. ಇದು ಸಮೃದ್ಧವಾದ ಜಾಲದಂತಹ ದ್ರವ್ಯವನ್ನೂ. ಕೀವಿನ ಕೋಶಗಳನ್ನೂ ಹೊಂದಿತ್ತು.

ನಾರು ಸಾಮಾನ್ಯವಾಗಿ ತ್ವಚೆಯ ಪ್ರದೇಶದಲ್ಲಿರುವುದು.
ಒಮ್ಮೊಮ್ಮೆ ಸ್ನಾಯುಮಂಡಲ ಸ್ನಾಯುರಜ್ಜುವಿನ ಕೋಶ
ಹಾಗೂ ಕೀಲುಗಳನ್ನು ಅದು ಆಶ್ರಯಿಸುವುದು. ಹೃತ್ಕೋಶ
ತರಡು, ತರಡಿನ ಹೊರಭಾಗ, ಮೆದುಳಿನ ಹೊರಮೈ ಮುಂತಾದ
ಜಾಗಗಳಲ್ಲಿಯೂ ನಾರುಬೇನೆ ಬಂದುದು ಗೊತ್ತಾಗಿದೆ. ಹಳ
ಗಾಲದ ನಾರು ಹುಣ್ಣುಗಳು ದಪ್ಪಗಿನ ಕವಾಟಗಳನ್ನೊಳ
ಗೊಂಡು ಒಳಗಡೆಗೆ ಲೋಳೆಯಂಥ ಸುಣ್ಣದ ಬಣ್ಣದ ಪದಾರ್ಥ
ದಿಂದ ಕೂಡಿ ಮೂತ್ರಕೋಶದ ಆಕಾರದಲ್ಲಿರುತ್ತವೆ. ಈ ಕವಾ
ಟದ ಪೊಳ್ಳು ಜಾಗದಲ್ಲಿ ಜಿಗುಟಾದ ಹಾಗೂ ಬಿಳಿ ಲೋಳೆ
ಯಂಥ ಪದಾರ್ಥವು ತುಂಬಿರುತ್ತದೆ.

ಈ ಕೋಶ ಕವಾಟದ ಸೂಕ್ಷ್ಮದರ್ಶಕ ಯಂತ್ರದ ಪರೀ
ಕ್ಷೆಯು, ಚೀಲವು ಹೊರಗಡೆ ತಂತುಪೂರ್ಣ (ಜಾಳಿಗೆಯಂತೆ
ವಾಗಿರುವುದನ್ನು ಒಳಗಡೆ ಕೋಶಗಳಿಂದ ಕೂಡಿದ ಕಣ ಕಣಗಳ
ಪದರಿನಂತಿರುವುದನ್ನು ಗೊತ್ತುಮಾಡಿಕೊಟ್ಟಿದೆ. ಒಳಗಿನ
ನಾಡಿಕೂಟ ಕಣಗಳು ಮೃತನಾರು ಜಂತಿನ ತುಂಡುಗಳನ್ನು
ಹೊಂದಿರುವುದೂ ಕಂಡುಬಂದಿದೆ.

೩. **ಬೇನೆಯ ತರುವಾಯದ ಪರಿಣಾಮಗಳು:**— ದೇಹದ
ಬೇರೆ ಬೇರೆ ಜಾಗಗಳಲ್ಲಿಯ ನಾರುಹುಣ್ಣು ಮಾಯ್ದ ಬಳಿಕ
ದೇಹದ ಆ ಭಾಗ ಕುಗ್ಗುವುದು ಹಾಗೂ ಕೀಲು ಹಿಡಿತವನ್ನುಂಟು
ಮಾಡಬಹುದು ಲವಣಾಂಶದಿಂದ ಬಿರುಸಾದ ಜಂತು, ಜೀವಾಣು
ಗಳ ನಳಿಕೆಯ ಹುರಿಯಲ್ಲಿ ಗಂಟುಗಳನ್ನುಂಟುಮಾಡುತ್ತದೆ

ನಾರುಬೇನೆಯು (ಶಾರೀರಿಕ ವಿಕಾರ) ಗಾಯುಗಳು-ವೈದ್ಯಕೀಯು ಲಕ್ಷಣಗಳು

ನಾರು ಬೇನೆ ತಗಲಿದ ರೋಗಿಯು ಪ್ರಾರಂಭದ ಲಕ್ಷಣಗಳು ಈ ರೀತಿಯಾಗಿರುತ್ತವೆ: ರೋಗಿಯು ಮೈಮೇಲೆ ಹೈತ್ರಗಿಯು ಪ್ರಕಾರದ ಕೆಂಪಾದ ಗಾಪರಿಗಳೇಳುವವು; ತುರಿಕೆ ಉಂಟಾಗುವುದು: ತಲೆ ನೋವು ಜ್ವರದೊಡನೆ ಚಳಿ ಬರುವುದು. ಹಾಗೂ ವಾಂತಿಯಾಗುವುದು. ರಕ್ತದಲ್ಲಿ ಶ್ವೇತ ವರ್ಣದ ಸ್ಫುರಣ ದ್ರವಗಳ ಸಂಖ್ಯೆ ಅತಿಯಾಗುವುದು. ಈ ಮೇಲೆ ಹೇಳಿದ ಶಾರೀರಿಕ ಲಕ್ಷಣಗಳು ಪ್ರತಿಯೊಬ್ಬರಲ್ಲಿ ಇದೇ ರೀತಿಯಾಗಿರುತ್ತವೆಯೆಂದು ನಿರ್ದಿಷ್ಟವಾಗಿ ಹೇಳಲಿಕ್ಕಾಗುವುದಿಲ್ಲ. ಏಕೆಂದರೆ ಕೆಲವು ರೋಗಿಗಳಲ್ಲಿ ನಾರಿನ ಗುಳ್ಳೆಯೇ ರೋಗದ ಪ್ರಥಮ ಚಿಹ್ನವಾಗಿರುತ್ತದೆ.

ನಾರಿನ ಗುಳ್ಳೆ :

ನಾರು ಜಂತು ತ್ವಚೆಯ ಕೆಳಭಾಗದಲ್ಲಿಂದ ಹೊರ ಬರುವ ಮುನ್ನ ದೇಹದ ಆ ಭಾಗದಲ್ಲಿ ಉರುಪನ್ನುಂಟು ಮಾಡುತ್ತದೆ. ಈ ಉರುಪು ತ್ವಚೆಯ ಮೇಲೆ ಮಂದವಾದ ತುರಿಕೆಯ ಪರಿಣಾಮ ಬೀರಿ ಗುಳ್ಳೆಯ ರೂಪಕ್ಕೆ ತಿರುಗುವುದು. ಉರುಪಿನ ದ್ರವವಸ್ತುವು ಆ ಸ್ಥಳದ ಜೀವ ತಂತುಕೂಟ (Tissues)ದ

ಬಾವಿಗೆ ಕಾರಣವಾಗುವುದು. ಆಗ ರೋಗಿಯು ನಾರಿನ ಗುಳ್ಳೆಯೊಡನೆ ವೈದ್ಯರ ಬಳಿಗೆ ಬರುವನು. ರೋಗಿಯಲ್ಲಿ ರೋಗ ಜಂತುವಿನಿಂದಾದ ಎಲ್ಲ ಲಕ್ಷಣಗಳೂ ಇರುತ್ತವೆ. ಗುಳ್ಳೆ ಎದ್ದಿರುವ ಜಾಗದ ಸುತ್ತಲಿನ ತೊಗಲಿನ ಜಾಗದಲ್ಲೆಲ್ಲ ಉರಿತವಿರುತ್ತದೆ. ಸಣ್ಣ ಪ್ರಮಾಣದಲ್ಲಿ ಜ್ವರವೂ ಬಂದಿರುತ್ತದೆ; ಸಂಜೇರಿದವನಹಾಗೆ ಕಾಣುತ್ತಿರುತ್ತಾನೆ. ಗುಳ್ಳೆ ಒಡೆದಾಗ ಆ ಜಾಗದ ತ್ವಚೆಯಲ್ಲಿಯೇ ನಾರಿನ ಹುಣ್ಣು ಕಂಡುಬಂದು ಅದರ ಮೂಲಕವೇ ಜಂತು ಹೊರಬರುತ್ತದೆ.

೨) ಹಳೆಗಾಲದ ಹುಣ್ಣು ಹಾಗೂ ಅದರ ಪೊಳ್ಳುಭಾಗ

ಗಾಯದ ಭಾಗದ ಜೀವತಂತು ಕೂಟಗಳು ಬಾತುಕೊಂಡು ಕೀವು ಸೋರುತ್ತಿರುತ್ತದೆ. ಬಾವಿನ ಸಮೀಪಕ್ಕಿರುವ ಎಲುಬಿನ ಕೀಲವು ತನ್ನ ಚಲನವಲನ ಶಕ್ತಿಯನ್ನು ಕಳೆದುಕೊಂಡು ನಿಷ್ಕ್ರಿಯವಾಗುವುದು. ನಾರುಜಂತುವಿನ ಗಾಯದ ಭಾಗವು ಯಕೃತ್ತಿನ ಅಭಿಧಮನಿಗಳ ಮೂಲಕ ಬರುವ ಪ್ರಥಮ ರೋಗದಾಯಕ ಜಂತುಗಳ ಸ್ಪರ್ಶದಿಂದಾಗಲೀ, ಅಥವಾ ಗಾಯದ ರೋಗದಾಯಕ ಜಂತುಗಳಿಂದಾಗಲೀ, ರೋಗ ಸ್ಪರ್ಶವಾಗುವುದು. ಈ ಅವಸ್ಥೆಯಲ್ಲಿ ಅಲ್ಲಿ ಕೀವು ತುಂಬಿದ ಕುರುವನ್ನು ಕಾಣಬಹುದಾಗಿದೆ. ಹುತ್ತದಲ್ಲಿಯ ಕುರುಗಳಲ್ಲಿಯೂ ಇತರ ಯಾವುದೇ ಭಾಗದ ಕೀವಿನ ಬೊಕ್ಕೆಗಳಲ್ಲಿ ಕಾಣುವ ರೋಗ ಲಕ್ಷಣಗಳನ್ನು ನಾವು ಕಾಣಬಹುದಾಗಿದೆ.

ನಾರಿನ ಒಳಕುರು (ಕುರುಡುನಾರು)

ರೋಗದ ಸಹಜ ಕ್ರಮದಲ್ಲಿ ನಾರಿನ ಜಂತು ತ್ವಚೆಯ ಮೇಲ್ಪದರದೆಯ ಭಾಗಕ್ಕೆ ಬರುವುದು. ಕೆಲವು ಸಲ ಗೊತ್ತಾಗದ ಕಾರಣಗಳಿಂದಾಗಿ ಜಂತು ತ್ವಚೆಯ ಮೇಲಿನ ಭಾಗದಲ್ಲಿ ಕಾಣಿಸಿ ಕೊಳ್ಳದಿರಲೂಬಹುದು. ಈ ಸ್ಥಿತಿಯಲ್ಲಿ ಮಾಂಸದ ಆಳವಾದ ಭಾಗದಲ್ಲಿ ಅದು ಗುಪ್ತವಾಗಿದ್ದುಕೊಂಡು (ಕುರುಡು ನಾರು) ಎಂದು ಬಹು ಅನ್ವರ್ಥಕವಾಗಿ ಕರೆಯಲ್ಪಡುತ್ತದೆ. ಇಂಥ ನಾರುಜಂತು ತಾನು ಹೊರಬಂದ ದಾರಿಯನ್ನೇ ಅರಿಯದ ಅವಸ್ಥೆ ಯಲ್ಲಿರುತ್ತದೆ. ಹೊರಬರಲಾರದ ಜಂತು ಜೀವತಂತು-ಕೂಟದ ಗರ್ಭಕ್ಕಿಳಿದುಬಿಡುವುದು. ಜಂತಿನಲ್ಲಿರುವ ತುರಿಕೆಯ ದ್ರವ್ಯ ಮತ್ತು ವಿಷದ್ರವ್ಯಗಳು ಜೀವತಂತು ಕೂಟವನ್ನು ಕೆರಳಿಸುವವು. ಈ ಕೆರಳಿಕೆಯ ಪ್ರಭಾವದಿಂದಾಗಿ ಜೀವತಂತು ಕೂಟವು ಅಧಿಕ ಪ್ರಮಾಣದಲ್ಲಿ ದ್ರವವನ್ನು ಸ್ರವಿಸುವುದು. ಸ್ರವಿತ ದ್ರವವು ತುರಿಕೆಯ ದ್ರವವಸ್ತುವಿನ ಶಕ್ತಿಯನ್ನು ಕುಂದಿಸುತ್ತದೆ. ಮತ್ತು ಜಾಳಿಗೆಯಂಥ ಜೀವತಂತು ಕೂಟವು ಕುರುಡುನಾರಿನ ಹುತ್ತಿನ ಕೊಂಡಿಯಂತೆ ರೂಪುಗೊಳ್ಳುವುದು.

ಹೀಗೆ ದೇಹದ ಮಾಂಸಖಂಡದ ಒಳಗಡೆಯಲ್ಲಿ ಆಳವಾಗಿ ಅವಿತು ಕುಳಿತಿರುವ ಕುರುಡು ನಾರಿನ ಹಾವು ವೈದ್ಯರ ರೋಗ ಪರೀಕ್ಷೆಯ ಎಲ್ಲ ಕ್ರಮಗಳನ್ನು ನಿರರ್ಥಕಗೊಳಿಸುತ್ತದೆ. ಬಹಳ ಸಲ ರೋಗದ ಕಂಡುಹಿಡಿಯುವಿಕೆಯನ್ನು ಕೆಳಗಿನ ಕಾರಣ ಗಳಿಂದಾಗಿ ಮಾಡಲಾಗುತ್ತದೆ.

೧) ನಾರು ಬೇನೆಯು ನಿಶ್ಚಿತ ಪ್ರದೇಶದಿಂದ ಬಂದ ವ್ಯಕ್ತಿಯಾಗಿದ್ದಾನೆಂದು

೨) ದೇಹದಲ್ಲಿ ಬರುವ ಪ್ರತಿಯೊಂದು ಬಾವಿಗೂ ನಿರ್ದಿಷ್ಟವಾದ ಲಕ್ಷಣಗಳಿರುತ್ತವೆ. ನಾರು ಬೇನೆಯು ಪ್ರಸಾರದ ನಿರ್ದಿಷ್ಟ ಪ್ರದೇಶದಿಂದ ಬರುವ ವ್ಯಕ್ತಿಯು ದೇಹದಲ್ಲಿ ಅನಿರ್ದಿಷ್ಟ ಲಕ್ಷಣಗಳುಳ್ಳ ಬಾವು ಇದ್ದರೆ ಅದು ಕುರುಡು ನಾರು ಇರಬಹುದೆಂದು ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಲಿಸುತ್ತಿರುವ ಸೂತ್ರ.

ಕುರುಡು ನಾರು ದೇಹದ ಯಾವ ಭಾಗದಲ್ಲಿಯಾದರೂ ಆಗಬಹುದು. ಆದರೆ ನಾವು ಇಂಥ ಕುರುಡು ನಾರನ್ನು ಮೊಳ-ಕಾಲ ಮಂಡಿಯ ಹಿಂಭಾಗದ ತಗ್ಗು ಪ್ರದೇಶದಲ್ಲಿ, ತೊಡೆ, ತೋಳು, ಕುತ್ತಿಗೆ. ಉದರಾಚ್ಛಾದನ ಪಟಲದ ಹಿಂಭಾಗದ ಜೀವತಂತು ಜಾಲದಲ್ಲಿ. ಜೀರ್ಣಾಂಗ ಭಾಗದ ಗೋಡೆಯಲ್ಲಿ (ಕುರುಡು ನಾರುಗಳನ್ನು)ಕಂಡಿದ್ದೇವೆ. ಕಾಲು ಹಾಗೂ ಕೈ-ಬೆರಳುಗಳಿಗೆ ಹೋಗುವ ಮಾಂಸದ ಪೊರೆಯಲ್ಲಿ (ಟೆಂಡನ್ ಸೀಥ್) ಈ ಕುರುಡು ನಾರು ಆಗಿ ಅವುಗಳ ಚಲನವಲನಕ್ಕೆ ಅಡೆ–ತಡೆ ಮಾಡುತ್ತದೆ. ಮತ್ತು ಮೇಲೆ ಹೇಳಿದ ಮಾಂಸದ ಹತ್ತಿರವಿದ್ದ ಜ್ಞಾನ ತಂತುಗಳ ಮೇಲೆ ಒತ್ತಡವನ್ನು ಹಾಕಿ ರೋಗವನ್ನುಂಟುಮಾಡುತ್ತದೆ.

ಡಾ|| ಡೋನಾಲ್ಡ ಸನ್ ಮತ್ತು ಆಂಜೆಲೊ ಎಂಬವರು ಇಂಥ ಕುರುಡು ನಾರು ಮಸ್ತಕ ಮಜ್ಜೆಯ ಹೊರಾವರಣ-

ದಲ್ಲಿಯಾಗಿ ಚತುರ್ನಾಂಗ ವಾಯುವನ್ನು ಉತ್ಪತ್ತಿ ಮಾಡುತ್ತ ದೆಂದು ಹೇಳಿದ್ದಾರೆ.

ಅನೇಕ ಸಲ ಕುರುಡು ನಾರು ಕ್ಷಯದ ಶೀತ ಗ್ರಂಥಿಗಳನ್ನು ಹೋಲುತ್ತದೆ. ಬೆನ್ನೆಲುಬಿನ ಸುತ್ತುಮುತ್ತಲಿನ ಭಾಗದಲ್ಲಿ ಇದು ಕಂಡಾಗಲಂತೂ ಹೀಗೆ ಗ್ರಹಿಕೆಯಾಗುವುದು ಹೆಚ್ಚು ಸಾಧ್ಯ. ಸೊವಾಸ (Psoas) ಎಂಬ ಸ್ನಾಯುಗಳ ಲ್ಲಾದ ಒಂದು ಕುರುಡು ನಾರಂತೂ ಮೊದಲು ನಮಗೆ ಕ್ಷಯ ಗ್ರಂಥಿ ಎಂಬ ತಿಳುವಳಿಕೆಯನ್ನೇ ಉಂಟುಮಾಡಿತು. ಆದರೆ ಶಸ್ತ್ರ ಚಿಕಿತ್ಸೆಯನ್ನು ಮಾಡುವಾಗ ಅದು ಕ್ಷಯ ಗ್ರಂಥಿಯಲ್ಲ, ಕುರುಡು ನಾರು ಎಂದು ಗೊತ್ತಾಯಿತು. ಮಂಡಿಯ ಹಿಂಭಾಗದ ಪ್ರೋಳ್ಳಿನಲ್ಲಾಗುವ ರಬ್ಬರ ಚಂಡಿನಂತೆ ಉಬ್ಬಿದ ಬಾವು. ಅಪ-ಧಮನಿಯ ಬಾವು ಎಂಬ ಕಲ್ಪನೆಯನ್ನು ತರುವುದು. ಚುಚ್ಚು-ಗೊಳವೆ (ಸಿರಂಜ್) ಯಿಂದ ಪರೀಕ್ಷೆ ಮಾಡುವುದು ಈ ಸಮಯ ದಲ್ಲಿ ಹೆಚ್ಚು ಲಾಭದಾಯಕ. ಸಂಶಯಪೀಡಿತ ಎಲ್ಲ ಕುರುಡು ನಾರು ಜೇನೆಯ ರೋಗಿಗಳನ್ನು 'ಎಕ್ಸರೇ' ಪರೀಕ್ಷೆಗೆ ಒಳಪಡಿಸಿದಾಗ ಸುಣ್ಣಗೊಂಡು ಘನೀಭೂತವಾದ ಜಂತುವು ಬಾವಿನಲ್ಲಿ ಅಥವಾ ಬಾವಿನ ಸುತ್ತಲಿನ ಪ್ರದೇಶದಲ್ಲಿ ಇರುವುದು ಗೋಚರಿಸಲ್ಪಡುತ್ತದೆ.

ಸಾಂಪ್ರದಾಯಿಕ ಚಿಕಿತ್ಸೆಗೆ ಗುಣವಾಗದ ಒಂದೇ ಸಮ-ನಾದ ಬಿಕ್ಕಳಿಕೆಯು ಶ್ವಾಸಕೋಶ ಪಟಲದ ಕೆಳಭಾಗದಲ್ಲಾದ ಕುರುಡು ನಾರಿನ ಕಾರಣದಿಂದಾಗಿ ಸಂಭವಿಸಬಹುದಾಗಿದೆ. ನಾರಿನ ವ್ರಣವನ್ನು ಬಿಸಿದು ಬರಿದು ಮಾಡಿ ನಾರು ಜಂತನ್ನು

ತೆಗೆದು ಹಾಕಿದಾಗ ಹತ್ತಿದ್ದ ಬಿಕ್ಕಳಿಕೆಯಿಂದ ರೋಗಿಯ
ಗುಣಮುಖನಾಗುವನು. ಇಂಥ ಎರಡು ರೋಗಿಗಳನ್ನು ಚಿಕಿತ್ಸೆ
ಒಳಪಡಿಸಿದಾಗ ಜಠರಾಂಗದ ಸಾದಾ ಎಕ್ಸರೇ ಪರೀಕ್ಷೆಯ
ಒಬ್ಬನ ಜೀರ್ಣಾಂಗದ ಮೇಲ್ಭಾಗದಲ್ಲಿ ಅಪ್ರತ್ಯಕ್ಷವಾಗಿ ಸೂ
ಸುವ ಘನೀಭೂತವಾದ ನಾರು ಜಂತು ಇರುವುದನ್ನು ತೋ
ಸಿತು. ಮತ್ತೊಬ್ಬನನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿದಾ
ಮಾತ್ರ ಕುರುಡು ನಾರಿರುವುದು ಕಂಡುಬಂದಿತು.

೩) ವೃಷಣಕೋಶದ ಕ್ರೂರಜಂತು :

ನಮ್ಮ ಅನುಭವದಂತೆ ಕರ್ನಾಟಕದ ಉತ್ತರ ಭಾಗದ
(ವಿಜಾಪುರ, ಕಲಬುರ್ಗಿ ಜಿಲ್ಲೆಗಳಲ್ಲಿ) ರೋಗಿಗಳ ವೃಷ
ಕೋಶದಲ್ಲಿ ನಾರುಜಂತು ಪ್ರಕಟಗೊಳ್ಳುವುದು ಸರ್ವೇ ಸಾಮಾ
ವಾಗಿದೆ. ಇನ್ನು ಹಂತ ಹಂತವಾಗಿ ಕೆಳಭಾಗದ ಅವಯ
ಗಳಲ್ಲಿ ನಾರು ಕಾಣಬರುತ್ತದೆ. ವೀರ್ಯನಾಳದಲ್ಲಿ ಅಥ
ತರಡು ಬೀಜದ ರಜ್ಜುವಿನಲ್ಲಿ ನಾರು ಗಟ್ಟಿಗೊಂಡು ಉಳಿ
ಬಹುದಾಗಿದೆ. ಇಂಥ ನಾರಿರುವ ರೋಗಿಯು ವೃಷಣ ಮತ
ವೃಷಣ ನಾಳದಲ್ಲಿ ಅನಿಶ್ಚಿತ ಮತ್ತು ಅಸ್ಪಷ್ಟವಾದ ನೋವನ
ಅನುಭವಿಸುತ್ತಿರುವನು. ಈ ಬೇನೆಯನ್ನೇ ನಾವು 'ವೃಷ
ಕೋಶ ಸರವೇದನೆ' ಎಂದು ಕರೆಯುವೆವು. ವೃಷಣ ನಾಳ
ಹಳಗಾಲದ ಈ ಒಳನಾರು ಗುರುವಿನ ರೋಗಗುಣವನ
ನಿರೂಪಿಸುವುದು ಬಹು ಕಷ್ಟಕರವಾದುದು. ಇದಕ್ಕೆ ಉರಿಯು
ತದ ಅಥವಾ ಉದ್ರೇಕಕಾರಕ ಗುಣವಿರುವುದಿಲ್ಲ. ಆದು

ರಿಂದಲೇ ಈ ನಾರಿನ ಒಳಗುರುವನ್ನು ಕ್ಷಯಶೀತಗುರುವೆಂದು ತಪ್ಪಾಗಿ ಅನೇಕ ಸಲ ಗ್ರಹಿಸುವರು ಶಸ್ತ್ರಕ್ರಿಯೆ ಮಾಡಿ ಹೊರ ತೆಗೆದಾಗಲೇ ಇದು ಬೇರೆ ಎಂಬುದು ತಿಳಿದು ಬರುವುದು.

ವೃಷಣ (ತರಡು) ದ ಒಳಭಾಗದ ಸುತ್ತಲಿನ ನಾರು ಜಂತು ಆ ಸ್ಥಳದಲ್ಲಿ ಕೆರಳಿಕೆಯು ಹಿಡಿಯನ್ನುಂಟುಮಾಡು ವುದು. ಮತ್ತು ಅಂಡವಾಯು ಉತ್ಪನ್ನವಾಗಿ ಮುಂದೆ ಈ ಅಂಡವಾಯುವೇ ಅಂಡದಲ್ಲಿ ಕೀವು ತುಂಬಿಸುವದು. ತರಡು ಬೀಜದಲ್ಲಿ ಗಟ್ಟಿಗೊಂಡ ನಾರಿನ ಜಂತು ಅತ್ಯುಗ್ರ ರೋಗ-ಸ್ಥಿತಿಯನ್ನು ಉಂಟುಮಾಡದೆ ಬಿಡುವುದಿಲ್ಲ. ಹೀಗೆಯೇ ಈ ರೋಗಸ್ಥಿತಿ ಅಂಡಕೋಶದ ವಾಯುವಿಗೆ ದಾರಿಮಾಡಿಕೊಡು ವುದು. ಎರಡೂ ಬದಿಯ ವೃಷಣಕೋಶದ ಕ್ರೂರ ಜಂತು ವಿನಿಂದ ಬಳಲುತ್ತಿದ್ದ ಇಬ್ಬರು ರೋಗಿಗಳು ಬಂಜೆತನ ಹೊಂದಿರು ವದನ್ನು ನಾವು ನೋಡಿದ್ದೇವೆ. ವೃಷಣಕೋಶದ ನಾರು ಜಂತು ಕೆಲವು ಸಲ ದೇಹದ ಮಧ್ಯಸೀಳಿನ ವ್ರಣದಿಂದ ಸರಳ ವಾಗಿ ಹೊರಬರುವುದು.

೪) ಶಿಶ್ನದ ಕ್ರೂರಜಂತು :

ಶಿಶ್ನದ ಭಾಗದಲ್ಲಿ ನಾರು ಉತ್ಪನ್ನವಾಗುವುದು ಬಹು ವಿರಳ. ನಮ್ಮ ವೈದ್ಯಕೀಯ ವಿದ್ಯಾರ್ಥಿಯೊಬ್ಬನಿಗೆ ಒಮ್ಮೆ ಇಂಥ ನಾರು ಆಗಿತ್ತು. ಶಿಶ್ನತ್ವಚೆಯ ಜೀವತಂತು ಕೂಟದ ಒಳಪದರಿನಲ್ಲಿ ನಾರುಜಂತು ಹುಟ್ಟಿದಾಗ ಅದು ಹೊರ ಚರ್ಮದ ಮೇಲಕ್ಕೆ ಬರುತ್ತದೆ. ಅಥವಾ ಒಳಗಡೆ ವೃಷಣ ಬೀಜಗಳ ಕಡೆಗೆ ಮತ್ತು ಸ್ನಾಯುರಜ್ಜುಗಳ ಕಡೆಗೆ ಇಳಿಯು

ತ್ತದೆ. ಶಿಶ್ನದಲ್ಲಾದ ನಾರಿನ ಕಾರಣದಿಂದ ನಮಗೆ ಯಾವದೆ ಬಗೆಯ ಚಿಕಿತ್ಸೆತೊಂದರೆಯಾಗಿರುವ ಉದಾಹರಣೆಗಳಿಲ್ಲ ನಾರಿನ ಜಂತು ಶಿಶ್ನದಿಂದ ಹೊರಬಂದಾಗ ಸ್ತ್ರೀಯು ಅಥವಾ ಇನ್ನಿತರ ಭಾಗದಲ್ಲಿ ರೋಗದ ಪ್ರಕಟಸ್ವರೂಪಗಳು ಕಂಡ ಬರುವುದು ಬಹು ಕಡಿಮೆ ಅಥವಾ ಇಲ್ಲವೆಂದೂ ಹೇಳಬಹುದು

ಹೀಗೆಯೇ ಕಣ್ಣುರೆಪ್ಪೆ, ನಾಲಿಗೆ ಮೊದಲಾದ ದೇಹದ ವಿಚಿತ್ರಕರ ಭಾಗಗಳಲ್ಲಾಗುವ ನಾರು ಜಂತನ್ನು ಹೊರಹಾಕ ವುದು ಸಾಧ್ಯವಿದೆ.

೫) ನಾರಿನ ಕೀಲುಬೇನೆ (ಸಂಧಿವಾತ) :



ನಾರು ಬೇನೆಯಿಂದ ಮೊಳಕಾಲಿನ ಕೀಲು ತೊಂದರೆ-ಗೊಳಗಾಗುವುದು ಬಹು ಸಾಮಾನ್ಯ. ವಿರಳವಾಗಿ ಕಾಲಿನ ಪದಡುಗೀಲಿಗಳ ಮೇಲೂ ಪರಿಣಾಮವಾಗುವುದುಂಟು. ನಾರು ಬೇನೆಯು ನಿರ್ದಿಷ್ಟ ಪ್ರದೇಶದ ರೋಗಿಗಳಲ್ಲಿ ಪ್ರತಿವರ್ಷ ನಾಲ್ಕಾರು ರೋಗಿಗಳು ಹೀಗೆ ಕೀಲುನೋವಿಗೆ ಒಳಗಾಗಿರುವ ದನ್ನು ನಾವು ಕಾಣುವೆವು. ಈ ಕೀಲುಬೇನೆ ಕೀಲುನೋವು

ಮತ್ತು ಬಾವಿನೊಂದಿಗೆ ಪ್ರಕಟವಾಗುತ್ತದೆ. ಮೊಳಕಾಲು ಚಿಪ್ಪಿನ ಮೇಲ್ಭಾಗದಲ್ಲಿ ಬಾವು ಅತಿ ಹೆಚ್ಚಾಗುವದು. ಆಗ ಮೊಳಕಾಲಿ ಚಲನವಲನ ನಿಂತಗೊಳ್ಳುತ್ತದೆ.

ಈ ಕೀಲುಪ್ರದೇಶದ ಎಕ್ಸ್‌ರೇ ತೆಗೆದಾಗ ಸಂಧಿಯಲ್ಲಿ ಹೆಚ್ಚು ವರಿಯಾದ ಜೀವತಂತು ಜಾಳಿಗೆಯ ಛಾಯೆ ಬೆಳೆದದ್ದು ಕಂಡು ಬರುತ್ತದೆ. ಎಲುಬಿಗೆ ಮಾತ್ರ ಯಾವ ಬಗೆಯ ತೊಂದರೆಯೂ ಘಟಿಸಿರುವದಿಲ್ಲ. ಮಂಡಿಯ ಕೀಲದಲ್ಲಿ ಘನೀಭೂತಗೊಂಡಿರುವ ನಾರು ಜಂತು ಕಂಡುಬಂದದ್ದಾದರೆ ಅದರ ಪರೀಕ್ಷೆ, ಚಿಕಿತ್ಸೆ ಅಷ್ಟೇನೂ ಕಷ್ಟವಲ್ಲ.

ನಮ್ಮ ರೂಢಿಯಲ್ಲಿ ನಾರುಜೇನಿಯಿಂದಾದ ಮೊಳಕಾಲು ಕೀಲಿನ ಸಂಧಿವಾತವು ಏಕಕೀಲ ಸಂಧಿವಾತವೆಂದು ಮತ್ತು ಸಂಧಿಸ್ರಾವ ಪೊರೆ ಜಾತ ಪ್ರಕಾರದ ಕ್ಷಯವೆಂದು ತಪ್ಪಾಗಿ ತಿಳಿಯಲ್ಪಡುತ್ತದೆ. ಈ ಸಂಶಯ ಎಷ್ಟರ ವರೆಗೆ ಮುಂದುವರಿಯುತ್ತದೆಂದರೆ, ಆರೆಂಟು ತಿಂಗಳುಗಳ ವರೆಗೆ ಕ್ಷಯ ನಿರೋಧಕ ಔಷಧಿಯನ್ನು ಕೊಡುವದು, ಮೊಳಕಾಲು ಕೀಲಕ್ಕೆ ಪ್ಲಾಸ್ಟರ್ ಕಟ್ಟುವದು ನಡೆಯುತ್ತದೆ. ಆದರೆ ರೋಗಿಯ ಸ್ಥಿತಿಯಲ್ಲಿ ಯಾವ ಬಗೆಯ ಗುಣಮುಖವೂ ಕಂಡುಬರುವದಿಲ್ಲ. ಆದುದರಿಂದಲೇ ಮೊಳಕಾಲು ಕೀಲಿನ ದಪ್ಪವಾಗಿರುವ ಸಂಧಿದ್ರವ ಪೊರೆಯೂತದ ಚಿಕಿತ್ಸೆಯನ್ನು, ಸಂಧಿದ್ರವ ಪೊರೆ ತೆಗೆದು ಹಾಕುವ ಶಸ್ತ್ರಚಿಕಿತ್ಸೆಯಿಂದಲೇ ಮಾಡುವದು ನಮ್ಮ ನಿಯಮವಾಗಿದೆ. ಈ ಪದ್ಧತಿಯು ಕೆಳಗಿನ ಪ್ರಯೋಜನಗಳನ್ನು ಪಡೆದಿರುತ್ತದೆ.

೧) ರೋಗಗ್ರಸ್ತ ಸಂಧಿದ್ರವ ಪೊರೆಯನ್ನು ತೆಗೆಯು ವುದು.

೨) ರೋಗವನ್ನು ಹೆಸರಿಸಿ ಸ್ಥಿರೀಕರಣವಾಗುವುದು.

ಸಂಧಿದ್ರವ ಪೊರೆಯನ್ನು ತೆಗೆದು ಹಾಕಿದ ನಂತರ ಮೂರ ನಾಲ್ಕು ತಿಂಗಳುಗಳಲ್ಲಿ ಹೊಸ ಪರದೆಯು ಅಸ್ತಿತ್ವದಲ್ಲಿ ಬರುತ್ತದೆ. ಮತ್ತು ಹೀಗಾಗುವುದರಿಂದ ಕೀಲಿನ ನಿರ್ಬಲತೆ (ನಿಷ್ಕ್ರಿಯತೆ) ಉಂಟಾಗುವುದಿಲ್ಲ. ನಾರುಜಂತಿನಿಂದ ಬಾಧೆಗೊಂಡ ಕೀಲುಗಳ ವಾಯು ಸೆಳೆತವಾಗಲಿ. ಮತ್ತು ದ್ರವವನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಪರೀಕ್ಷಿಸುವುದಾಗಲಿ ರೋಗನಿಧಾನದಲ್ಲಿ ನಮಗೆ ಸಹಾಯಕಾರಿಯಾಗಲಿಲ್ಲ. ಕೀಲುದ್ರವದಲ್ಲಿ ಅಪರಿಪಕ್ವ ಮರಿಹುಳುವನ್ನು ಯಾವ ಸಮಯದಲ್ಲಿಯೂ ನಾವು ಕಂಡಿಲ್ಲ. ಮೊಳಕಾಲಿನ ಕೀಲದಲ್ಲಾಗುವ ನಾರುಬೇನೆಯಲ್ಲಿ ನಾರುಜಂತು ಯಾವಾಗಲೂ ಮೊಳಕಾಲ ಚಿಪ್ಪಿನ ಮೇಲಿನ ಚೀಲದಲ್ಲಿ ಕಂಡುಬರುತ್ತದೆ. ಕೆಲವು ಸಲ ನಾರಿನ ಅರ್ಧಭಾಗವು ಮಾಂಸಖಂಡದ ಹೊರಾವರಣದಲ್ಲಿ ಕಾಣುವುದು. ಕೀಲುದ್ರವ ಪೊರೆಯಲ್ಲಿ ನಾರು ಸ್ವತಂತ್ರವಾಗಿರುವುದನ್ನು ನಾವು ನೋಡಿಲ್ಲ. ಈ ನಾರನು ಚಿಕಿತ್ಸೆ ಮಾಡದೆ ಬಿಟ್ಟರೆ ನಾರು ಜಂತು ಕುರುಡು ನಾರು ಹುಟ್ಟುವಂತೆ ಮಾಡುತ್ತದೆ. ಈ ಕೀವದ ಗಂಟು ಒಡೆದಾಗ ಮುಂದೆ ಮೊಳಕಾಲಿನ ಕೀಲು ಬಾಧೆಗೊಳಗಾಗುವುದು. ಇದು ಮುಂದೆ ಕೀವು ತುಂಬಿದ ಸಂಧಿವಾತಕ್ಕೆ ದಾರಿಮಾಡಿಕೊಡುವುದು. ಗಟ್ಟಿಗೊಂಡ ನಾರುಜಂತು ತೊಡೆಯೆಲುಬಿನ ಮೇಲಿರುವ ಚತುರ್ಮುಖ ಸ್ನಾಯುವಿನ

ಚಲನವಲನವನ್ನು ನಿಲ್ಲಿಸುತ್ತದೆ ಕೀಲುಗಳು ನಿಷ್ಕ್ರಿಯವಾಗುವಂತೆ ಮಾಡುತ್ತದೆ. ಹೀಗಾಗಿ ಕೀಲುಗಳು ಬಿಗಿದುಕೊಳ್ಳುತ್ತವೆ. ದೀರ್ಘಕಾಲಿಕ ಕೀಲುದ್ರವ ಪ್ರೊಟೀಯ ಊತವು ಅಕ್ಕ ಮಂಡಿಜಾಳಿಗೆ ರಚನೆಯಾಗುವಂತೆ ಮತ್ತು ಕೀಲು ನಿಷ್ಕ್ರಿಯತೆ ಹುಟ್ಟುವಂತೆ ಮಾಡುತ್ತದೆ ನಮ್ಮ ಹತ್ತಿರ ಬಂದ ರೋಗಿಯೊಬ್ಬನ ಕೀಲುಗಳು ಸಂಪೂರ್ಣವಾಗಿ ಕ್ರಮಗೆಟ್ಟು ಹೋಗಿದ್ದವು. ಕೀಲು ಸಂಬಂಧವಾದ ಮೃದ್ವಸ್ಥಿಯು ಕೆಟ್ಟು ಹೋಗಿತ್ತು. ಈ ರೋಗಿಗೆ ಕೀಲಿನ ಎರಡೂ ಬದಿಯ ಮೃದ್ವಸ್ಥಿಗಳನ್ನು ಕತ್ತಿ ಹೊಂದಿಸಿ ಎರಡೂ ಒಂದಕ್ಕೊಂದು [ಸಂಶ್ಲೇಷಣೆಯಲ್ಲಿ] ಹೊಂದುವಂತೆ ಬಿಗಿದು ಕಟ್ಟುವುದು. 'ಚಾರ್ನಲಿ ಪದ್ಧತಿ'ಯ ಕೀಲು ಚಿಕಿತ್ಸೆ ಅವಶ್ಯವಾಗಿತ್ತು. ಕೂಲಿಯ ಕೆಲಸ ಮಾಡುವ ವರ್ಗದ ಜನಗಳಲ್ಲಿ ಸಾರುಬೇನೆ ಸಾಮಾನ್ಯ ಕ್ರಿಯಾತ್ಮಕವಾಗಿದ್ದು ಕೀಲುಗಳು ಈ ಬೇನೆಯಿಂದ ನಿಷ್ಕ್ರಿಯಗೊಂಡು ದುಡಿಯುವ ಬಡರೋಗಿಗಳು ನರಳುವರು ಕಷ್ಟಲ್ಲಿದೆ ಮುಂದೆ ಕೆಲಸ ಮಾಡಲು ಅವರು ಅಸಮರ್ಥರಾಗುವರು ಆದುದರಿಂದ ಬೇಗನೆ ಇಂಥವರು ಸಾರುಬೇನೆಯ ರೋಗ ಪರೀಕ್ಷೆಯಾಗಬೇಕು. ನಮ್ಮ ರೋಗ ಪರೀಕ್ಷೆಯ ಸೂತ್ರ ಹೀಗಿದೆ.

"ರೋಗನಿರ್ದಿಷ್ಟ ಪ್ರದೇಶದಲ್ಲಿ ದೀರ್ಘಕಾಲಿಕ ಸಂಧಿದ್ರವ ಪೊರೆ ಬಾವು, ಮೊಳಕಾಲು ಚಿಪ್ಪಿನ ಮೇಲ್ಭಾಗವು ದಪ್ಪವಾಗುವಿಕೆ. ಇವು ಸಾರುಜಂತಿನ ಪ್ರಕಟಾವಸ್ಥೆಯಿಂದಲೇ ಆಗುವವು. ಮತ್ತು ಇವು ಸಂಧಿದ್ರವ ಪೊರೆತೆಗೆಯುವ ಶಸ್ತ್ರಚಿಕಿತ್ಸೆಯಿಂದಲೇ ವಾಸಿ ಮಾಡಬೇಕು.

೬) ಗಟ್ಟಿಗೊಂಡ ನಾರು ಜಂತು:

ಕಿಪ್ಪೊಟ್ಟೆಯ ಪೇಶಿಯ ಅಂತರ್ತ್ವಚೆಯ ಸ್ಥಳದಲ್ಲಿ ಸಾಮಾನ್ಯವಾಗಿ ಗಟ್ಟಿಗೊಂಡ ನಾರು ಜಂತು ಸಿಗುವುದು. ಬೇರೆ ರೋಗದ ಪರೀಕ್ಷೆಗಾಗಿ ತೆಗೆದ 'ಜಠರ ಭಾಗದ ಎಕ್ಸ್‌ರೇ'ದಿಂದ ಈ ಗಟ್ಟಿಗೊಂಡ ನಾರುಜಂತು ಕಂಡು ಬರುತ್ತದೆ. ನಾರು ಕೀಲುಗಳ ಹತ್ತಿರ ತ್ವಚೆಯ ಕೊನೆಯ ಭಾಗದಲ್ಲಿ, ಸ್ನಾಯು ಪ್ರದೇಶದಲ್ಲಿ ಕಾಣಬರುವುದು ಸಾಮಾನ್ಯವಾಗಿ ಗಟ್ಟಿಗೊಂಡ ನಾರು ಯಾವ ರೋಗ ಲಕ್ಷಣವನ್ನೂ ಹೊಂದಿರುವುದಿಲ್ಲ. ವೃಷಣಕೋಶದಲ್ಲಿ ನೋವನ್ನುಂಟು ಮಾಡುವ ವೀರ್ಯನಾಳದಲ್ಲಿ ಗಟ್ಟಿಗೊಂಡ ನಾರು ಇರುವ ಹನ್ನೆರಡು ರೋಗಿಗಳ ಉದಾಹರಣೆ ನಮಗೆ ಸಿಕ್ಕಿವೆ. ಗಟ್ಟಿಗೊಂಡಿದ್ದ ಈ ನಾರನ್ನು ತೆಗೆದು ಹಾಕಿದಾಗ ರೋಗಿಯು ಗುಣಮುಖವಾಗುವನು. ಸಣ್ಣ ಕೀಲು ಪ್ರದೇಶದಲ್ಲಿ ಮತ್ತು ಸ್ನಾಯುಗಳಲ್ಲಿ ಹುಟ್ಟಿಕೊಂಡು ನಾರು ತೊಂದರೆ ಕೊಡಹತ್ತಿದ ಕೂಡಲೇ ಅವುಗಳನ್ನು ತೆಗೆದು ಹಾಕಬೇಕು.

೭) ಕಾಲು ಹಿಮ್ಮಡಿಯ ಕೀಲದ ಕುರೂಪತನ:

ನಾರುಬೇನೆಯಿಂದ ಉಂಟಾಗುವ ಸಾಮಾನ್ಯ ಊನತನವಿದು. ನಾರುಬೇನೆ ಅಂಟುವುದರಿಂದ ಉಂಟಾಗುವ ದಟ್ಟ ಜಾಲದ ರೋಗ ಜಂತುಗಳಿಂದ ಜಠರ ಸ್ನಾಯುಗಳು ಸತ್ತು ಹೋಗುವವು. ನಿರ್ಜೀವವಾದ ಜೀವತಂತು ಕೊಟ್ಟ ಜಾಳಿಗೆಯಂತಾಗಿ ಗುಣವಾಗುತ್ತದೆ. ಜಾಳಿಗೆಗೊಂಡ ಜೀವ ತಂತು

ಕೂಟಕ್ಕೆ ಆಕುಂಚನ ಲಕ್ಷಣವಿರುತ್ತದೆ. ಕಾಲಿನ ಸ್ನಾಯು ಗಳು ಆಕುಂಚನಗೊಳ್ಳುವುದರಿಂದ ಕೀಲು ಅಂದಗೆಡುವುದು. ರೋಗ ಪ್ರದೇಶದ ಸಾವಿರ ರೋಗಗಳಲ್ಲಿ ಒಬ್ಬನಿಗೆ ಈ ಬಗೆಯ ಕುರೂಪತನವು ನಾರುಬೇನೆಯು ತರುವಾಯ ಉಳಿಯುತ್ತದೆ. ನಾವು ನಮ್ಮ ಆಸ್ಪತ್ರೆಯಲ್ಲಿಯೇ ಇಬ್ಬರಿಗೆ ಇಂಥ ಅಂದಗೇಡಿತನ ಉಂಟಾದುದನ್ನು ಕಣ್ಣಾರೆ ಕಂಡವರಾಗಿರುವೆವು. ಅಕಿಲಿಸ್ ಟೆಂಡನ್‌ದ ಝೆಡ್ ಪ್ಲಾಸ್ಟಿ ಮಾಡಿದರೆ ಉತ್ತಮ ಪರಿಣಾಮ ಕೊಡುತ್ತವೆ ಇದರ ಜೊತೆಯಲ್ಲಿ ಇನ್ನೂ ಕೆಲವು ರೋಗ ಗಳಲ್ಲಿ ನಾವು ಕಾಲುಹಡದಿನ ಸಂಧಿಯ ಸುತ್ತು ಮುತ್ತಲಿನ ಜಾಳಿಗೆಯನ್ನು ತೆಗೆದುಹಾಕುವುದರಿಂದ ಗುಣವಾಗುತ್ತದೆ

೮) ಕಾಲು ಹಡದಿನ ಕೀಲ ನಿಷ್ಕ್ರಿಯತೆ :

ಕೀಲಿನ ಹತ್ತಿರ ಉಂಟಾದ ನಾರು ಬೇನೆಯು ಕಾರಣ ವಾಗಿ ಕೀಲಿನ ಸುತ್ತಲೂ ಬೆಳೆಯುವ ದಪ್ಪನ್ನ ಪೊರೆಯಿಂದ ಕೀಲು ಮಣಿಯದಂತಾಗುತ್ತದೆ. ಮತ್ತು ಬಿರುಸಾಗುತ್ತದೆ. ಮೊಳಕಾಲು ಕೀಲು, ಹಡದಿನ ಕೀಲು, ಮೊಳಕಾಲು ಮತ್ತು ಪಾದದ ಸಣ್ಣ ಸಂಧಿಗಳು ಅತಿ ಸಾಮಾನ್ಯವಾಗಿ ರೋಗಕ್ಕೆ ಬಲಿ ಯಾಗುತ್ತವೆ. ಇಂಥ ಸಂದರ್ಭದಲ್ಲಿ ಕೀಲುಗಳ ಚಲನವಲನ ಮಾಡಿಸುವುದು ಮತ್ತು ಕಾವು ಮಾಡುವುದು ಇಂಥ ಉಪಕ್ರಮ ಗಳು ತುಸು ಮಟ್ಟಿಗೆ ಕೀಲಿನ ಬಿರುಸುತನವನ್ನು ಹೋಗಲಾಡಿ ಸುತ್ತವೆ. ಹಡದಿನ ಕೀಲುಗಳಲ್ಲಿ ನಾರು ಜಾಳಿಗೆಗೊಂಡ ರೋಗಿ ಗಳು ಈ ಕ್ರಮದಿಂದ ಗುಣಹೊಂದುವುದು ಕಷ್ಟ. ಆದುದರಿಂದ

ರೋಗಿಗೆ ನೋವು ಹೆಚ್ಚುವುದು. ಸ್ಥಿ ಕೀಲುಗಳಲ್ಲಿ ಬದ ಲಾವಣೆ ಕಾಣತೊಡಗುವುದು. ಕೀಲುಗಳ ದುರ್ಬಲತೆ ಉಂಟಾದಾಗ ಮೊಳಕಾಲು, ಹದಡ, ಪಾದದ ಸಣ್ಣ ಸಣ್ಣ ಕೀಲುಗಳನ್ನು ಸರಿಪಡಿಸಬೇಕಾಗುವುದು. ಆದರೆ ಮೊಳಕೈ ಕೀಲದ ವಿಷಯದಲ್ಲಿ ಕೀಲವನ್ನು ಸರಿಪಡಿಸಲು ಕೀಲದ ಪುನ-ರ್ನಿರ್ಮಾಣ ಮಾಡಬೇಕಾಗುತ್ತದೆ.

೯) ಮಿಶ್ರ ವ್ರಣಗಳು:

ಕ್ರಿ. ಶ. ೧೯೭೧ರಲ್ಲಿ ಎಂ. ಎಲ್. ಕೊಠಾರಿ ಎಂಬುವರು ಕುರುಡು ನಾರು ವಾಯು ಗುರುಮುವನ್ನು. ತೊಡೆಯೊಳಗಿನ ಸ್ನಾಯುವಿನಲ್ಲಿ (ಚತುರ್ಮುಖ ಸ್ನಾಯುವಿನಲ್ಲಿ) ಅಂತರ್ಗತ ಊತ ಮಾಡುತ್ತದೆಂದೂ, ಬಹುಕಾಲದ ನಾರುಜಂತು ಮೊಳ ಕಾಲಚಿಪ್ಪಿನ ಆದಿ ಭಾಗದಲ್ಲಿ ಸ್ನಾಯು ಜಾಲವನ್ನುಂಟು ಮಾಡು ತ್ತದೆಂಮೂ ಹೇಳಿದ್ದಾರೆ. ಇದಲ್ಲದೆ ಅವರು ಇನ್ನೂ ಹೇಳಿರು ವುದೇನೆಂದರೆ ಮೊಳಕಾಲಿನ ಕೆಳಭಾಗದ ಎಲುಬಿನ ಒಳಗಡೆ ಈ ನಾರು ಹುಳು ಹತ್ತಿ ಮೂಳೆಯ ರೋಗವನ್ನು ಉಂಟು ಮಾಡುತ್ತದೆ.

ಎಕ್ಸರೇದಲ್ಲಿ ಕಂಡು ಬರುವ (ಸುಣ್ಣಗೊಂಡು) ಗಟ್ಟಿ ಯಾದ ನಾರುಜಂತು ತೊಡೆಯ ಎಲುಬನ್ನು ಹಾಗೂ ಮೊಳ ಕಾಲಿನ ಕೆಳಭಾಗದ ಎಲುಬನ್ನು ಹುಳುಕಾಗಿಸಿರುವುದು ನಮ್ಮ ಅನುಭವಕ್ಕೆ ಬಂದಿದೆ. ಹುಳುಕು ಮೂಳೆಯ ರೋಗವು ನಾರಿನಿಂದಲೇ ಉಂಟಾಯಿತು ಎಂದು ಹೇಳಲು ನಮಗೆ

ಬಹು ಕಠಿಣವೆನಿಸುತ್ತದೆ. ಏಕೆಂದರೆ ಈ ಪ್ರದೇಶದಲ್ಲಿ ಬಹು ಸಂಖ್ಯೆಯಲ್ಲಿ ಗಟ್ಟಿಯಾಗಿರುವ ನಾರುಜಂತುಗಳನ್ನು ಕಾಣಬಹುದಾಗಿದೆ ಆದರೆ ಇವು ಯಾವುದೇ ತರದ ವ್ರಣಗಳನ್ನುಂಟು ಮಾಡುವುದಿಲ್ಲ. ಎಲುಬು. ಹುಳುಕು ಮೂಳೆಯು ರೋಗಕ್ಕೆ ತುತ್ತಾಗಿ ರೋಗಿಯು ಕೀವದಿಂದ ತೂತುಬಿದ್ದ ಎಲುಬಿನ ಆ ಸ್ಥಳದಲ್ಲಿ ಗಟ್ಟಿಗೊಂಡ ನಾರುಗಳಿರಬಹುದು. ಆದರೆ ಇವೇ ಗಟ್ಟಿಗೊಂಡ ನಾರುಗಳು ಎಲುಬಿನ ಹುಳುಕು ರೋಗಕ್ಕೆ ಕಾರಣವಾಗಿವೆ ಎಂದು ಹೇಳುವುದು ದುಸ್ತರ.

ಹಳಗಾಲದ ನಾರು ಹುಣ್ಣು ಕ್ಯಾನ್ಸರ ಹುಣ್ಣಾಗಿ ಮಾರ್ಪಾಡಾಗುವುದನ್ನು ನಾವು ಕಂಡಿರುವೆವು.

ನಾರು ಬೇನೆಯ ಚಿಕಿತ್ಸೆ (ಉಪಚಾರ)

ನಾರು ಬೇನೆಯನ್ನು ಹತೋಟಿಗೆ ತರಲು ಹಲವಾರು ಪ್ರಯತ್ನಗಳು ಮಾಡಲ್ಪಟ್ಟಿವೆ. ಈ ರೋಗವನ್ನು ನಿವಾರಿಸುವ ಔಷಧಿಗಳ ಗುಂಪಿನಲ್ಲಿ ನಿರಿಧಾಜೋಲ್, ಮೆಟ್ರೊನಿಧಾಜೋಲ್, ಡೈಥಿಲ್ ಕಾರ್ಬಾಮ್ಯಾಜಿನ್ ಮೊದಲಾದವುಗಳನ್ನು ಔಷಧ ತಜ್ಞರು ಪ್ರಯೋಗಿಸಿದ್ದಾರೆ. ಈ ಔಷಧಿಗಳ ಪರಿಣಾಮವು ಹೆಚ್ಚು-ಕಡಿಮೆಯಾಗಿ ಕಂಡು ಬಂದಿರುತ್ತದೆ. ಮೇಲೆ ಹೇಳಿದ ಈ ನಿಗದಿಯಾದ ಔಷಧಿಗಳು ಸಿಗದೇ ಇರುವ ನಮ್ಮ ಭಾಗದ ಹಳ್ಳಿಗಾಡು ಪ್ರದೇಶಗಳಲ್ಲಿ ಗ್ರಾಮೀಣ ಜನಗಳು ತಮ್ಮದೇ ಆದ ಕೆಲವು ಚಿಕಿತ್ಸೆಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಕೆಲವು ಹೀಗಿವೆ.

೧) ಹೆಣ್ಣು ತುರಬೀ ಗಿಡದ ತಪ್ಪಲನ್ನು ಒಣಗಿಸಿ ಆರರಿಂದ ಎಂಟು ತೊಲಿಯಷ್ಟು ರೋಗಿಗೆ ಕೊಡುವುದು ಬಹು-ತರವಾಗಿ ನಾರುಜಂತು ಒಂದೊಂದಾಗಿ ಹೊರಬರಲು ಸಹಾಯವಾಗುತ್ತದೆ. ತುರಬೀ ಗಿಡಕ್ಕೆ ವಿಭೂತಿ ಗಿಡವೆಂದೂ ಕೆಲವು ಕಡೆ ಕರೆಯುವರು. ಈ ಔಷಧಿಯನ್ನು ಸೇವಿಸುತ್ತಿರುವಾಗ ರೋಗಿಯು ಪಥ್ಯ ಮಾಡುವುದು ಅವಶ್ಯ. ಬೀಜೋಳದ ರೊಟ್ಟಿ ಸಪ್ಪನ್ನ ಬೇಳೆ ಊಟ ಮಾಡುತ್ತಿರಬೇಕು. ಮನೆಯಲ್ಲಿ ಬೀಸಿದ ಹಿಟ್ಟಿನ ರೊಟ್ಟಿಯನ್ನೇ ಮೂರು ದಿನ ತಿನ್ನಬೇಕು.

೨) ಪಟಿಕವನ್ನು ಪುಡಿಯ ನಾರಿನಲ್ಲಿ ಸುಡಲಾಗುವದು. ಹಾಗೆ ಸುಡುವಾಗ ಅದು ಅರಳಾಗುವುದನ್ನು ನೋಡಬೇಕು. ಅರಳಾದ ಪಟಿಕದ ಪುಡಿಯನ್ನು ರೋಗಿಗೆ ಕೊಡುವದರಿಂದ ನಾರು ಜಂತುಗಳು ಸರಳವಾಗಿ ಹೊರಬರುವವು ಮತ್ತು ರೋಗಿಯು ತೊಂದರೆಗೊಳಗಾಗದೆ ಬೇಗ ಗುಣ ಹೊಂದುವನು. ಸುಟ್ಟ ಪಟಿಕವು ನಾರುಜೇನೆಯ ನಂಜಿನ ಪ್ರಭಾವವನ್ನು ತಗ್ಗಿಸುತ್ತದೆ.

೩) ಹಾವಿನ ಪರೆಯನ್ನು ಬೆಲ್ಲದಲ್ಲಿ ಕೂಡಿಸಿ ಕೊಡುವ ಚಿಕಿತ್ಸೆಯೂ ಒಂದುಂಟು.

೪) ರೋಗವನ್ನು ತಡೆಗಟ್ಟುವಲ್ಲಿ ಮುಂಜಾಗ್ರತೆಯ ಕ್ರಮಗಳೇ ಉತ್ತಮ ಚಿಕಿತ್ಸೆ ಎಂದು ಹೇಳುವುದುಂಟು.

ಯಾವುದೇ ಜೇನೆಯು ಬಂದಾಗ ಔಷಧೋಪಚಾರದಿಂದ ಎದುರಿಸುವುದಕ್ಕಿಂತ ಅದು ಬರಲಾರದ ಹಾಗೆ ಮೊದಲು ಎಚ್ಚರಿಕೆಗಳನ್ನು ವಹಿಸುತ್ತಿರುವುದು ಬಹು ಶ್ರೇಷ್ಠವಾದುದು. 'ಚಿಕಿತ್ಸೆಗಿಂತ ಮುಂಗಾವಲು ಮೇಲು' ಎನ್ನುವ ಗಾದೆಯೊಂದಿದೆ. ಹೀಗಿದ್ದರೂ ಸಾರ್ವಜನಿಕ ಆರೋಗ್ಯ ಇಲಾಖೆಯವರು ನಮ್ಮ ಹಳ್ಳಿಗಾಡಿನ ಅನೇಕ ಭಾಗಗಳಲ್ಲಿಯ ಹೊಕ್ಕು ತುಂಬುವ ಬಾವಿಗಳನ್ನು ಸೇದುವ ಬಾವಿಗಳಾಗಿರುವಂತೆ ನೋಡಿಕೊಂಡಿಲ್ಲ. ಜನಗಳಲ್ಲಿಯೂ ಜೇನೆ, ಆರೋಗ್ಯ, ಸ್ವಚ್ಛತೆ ಇವುಗಳ ಕಲ್ಪನೆ ಇನ್ನೂ ಬಹಳಷ್ಟು ಬಂದಿರುವದಿಲ್ಲ. ಸಾಮಾನ್ಯ

ಜನತೆಯಲ್ಲಿ ನಾರು ಜೇನೆಯ ಬಗ್ಗೆ ಸರಿಯಾದ ತಿಳುವ
ಹರಡುವಂತಾಗಬೇಕು.

ಅಪರಿಚಿತ ಸ್ಥಳಕ್ಕೆ ಹೋಗುವ ಯಾವುದೇ ವ್ಯಕ್ತಿಯ
ಅಲ್ಲಿಯ ನೀರನ್ನು ಕುಡಿಯುವ ಮೊದಲು ಅದನ್ನು ಕ
ಯುವ ವರೆಗೆ ಕಾಯಿಸಬೇಕು. ಬಳಿಕ ಆರಿಸಿ ಶುಚಿಯಾಗಿರು
ಮಾಂಜರಪಾಟ ಅರಿವೆಯನ್ನು ೮-೧೦ ಮಡಿಕೆ ಮಾ
ಪಾತ್ರೆಯ ಬಾಯಿಗೆ ಹಾಕಿ ನೀರನ್ನು ಸೋಸಿಕೊಳ್ಳಬೇಕ
ಏಕೆಂದರೆ ನಾರುಜಂತಿನ ಪ್ರಥಮಾವಸ್ಥೆಯ ಮರಿಕೀಟ (ಸೈಕ್ಲೊ
ಪ)ಗಳು ಬಹು ಸೂಕ್ಷ್ಮವಾಗಿರುತ್ತವೆ. ಇದರ ಗಾತ್ರ ೧.೫ ×
ಎಂ. ಎಂ. ಇರುತ್ತದೆ. ಈ ಅತ್ಯಂತ ಸೂಕ್ಷ್ಮಮರಿಕೀ
ಗಳೆಲ್ಲ ಮಾಂಜರಪಾಟಿನ ಪದರುಗಳಲ್ಲಿ ತಡೆಯಲ್ಪಡುತ್ತ
ತಂತು ರೂಪದ ಲಾರ್ವಾ (ಸೂಕ್ಷ್ಮ ಕೀಟು)ಗಳನ್ನು ಹೊ
ರುವ ಸೈಕ್ಲೋಪಗಳಿಂದ ತಪ್ಪಿಸಿಕೊಳ್ಳಲು ಜನರು ನೀರ
ಕುದಿಸಿ ಸೋಸಿ ಕುಡಿಯಲೇಬೇಕು. ಅದರಲ್ಲಿ ತುಸು ಪೊ
ಶಿಯಂ ಪರಮಾಂಗನೇಟ ಹಾಕುವುದು ವಿಹಿತ. ಒಬ್ಬ
ನಾರು ಜೇನೆಗೆ ತುತ್ತಾಗಿದ್ದರೆ ಅವನ ಜೇನೆ ಯಾವ ಮಟ್ಟ
ಲ್ಲಿದೆ ಎಂಬುದನ್ನು ತಿಳಿದುಕೊಂಡು ಹತೋಟಿಗೆ ತರಲು ಪ್ರ
ತ್ನಿಸಬೇಕು.

ಸ್ಪರ್ಶದಿಂದ ತೀಡು ಬರುವ ಚರ್ಮಾಂತರ್ಗತ ನಾ
ಜಂತು ಶಸ್ತ್ರಕ್ರಿಯೆಗೇ ಒಳಪಡಬೇಕು.

ಗ್ರಾಮೀಣ ಪ್ರದೇಶದ ಹಡಪಿಗರಲ್ಲಿ (ಹಜಾಮರು
ಹಲವರು ಚರ್ಮದ ಪದರುಗಳನ್ನು ಕೊಯ್ದು ಒಳಗ

ನಾರನ್ನು ಹೊರಗೆಳೆದು ತೆಗೆಯುವುದರಲ್ಲಿ ನಿಸ್ಸೀಮರಾಗಿರುತ್ತಾರೆ. ಪ್ರಾಯಶಃ ಕೆಲವು ಸಲ ಕಲಿತ ಸರ್ಜನ್‌ಗಳಿಗಿಂತಲೂ ಹೆಚ್ಚು ತರಬೇತಾದವರಂತೆ ಇರುವರು. ಆದರೆ ಇವರಲ್ಲಿ ಇರುವ ಒಂದು ಭಯಂಕರ ತೊಡಕೆಂದರೆ. ಕೊಯ್ಯಲು ಉಪಯೋಗಿಸುವ ಉಪಕರಣಗಳನ್ನು ಕುದಿಯುವ ನೀರಿನಲ್ಲಿ ಶುದ್ಧೀಕರಿಸದಿರುವುದು. ಶುದ್ಧವಾಗಿರದ ಇಂಥ ನಂಜಿನ ಉಪಕರಣಗಳು ರೋಗಿಯಲ್ಲಿ ಬಹುತರವಾಗಿ ಧನುರ್ವಾತವನ್ನು ತರುತ್ತವೆ; ಕೊಯ್ದ ಗಾಯಗಳು ಮಲಿನಗೊಳ್ಳುತ್ತವೆ. ಐದು ವರ್ಷಗಳ ಅವಧಿಯಲ್ಲಿ ನಾವು ಈ ಬಗೆಯ ಹಡಪಿಗರಿಂದ ಕೊಯ್ಯಿಸಿಕೊಂಡ ನಾರು ಜೀನೆಯ ಧನುರ್ವಾತ ಪೀಡಿತರಾದ ಇಬ್ಬರು ರೋಗಿಗಳನ್ನು ಕಂಡಿದ್ದೇವೆ.

೧) ಚರ್ಮಾಂತರ್ಗತ ನಾರನ್ನು ಹೊಂದಿರುವ ರೋಗಿಯ ನಾರನ್ನು ಹೊರತೆಗೆಯುವಾಗ ಆಸ್ಪತ್ರೆಗಳಲ್ಲಿ ಕಟ್ಟುನಿಟ್ಟಾದ ಶುಚಿ ಕ್ರಮಕ್ಕೊಳಗಾಗಿರುವ ಶಸ್ತ್ರಚಿಕಿತ್ಸೆ ನಡೆಯಬೇಕು. ಜಂತನ್ನು ಹೊರತೆಗೆಯಲು ಪ್ರತಿಶತ ಒಂದು ಪ್ರಮಾಣದಲ್ಲಿರುವ ಝೈಲೋಕಿನ್ನನ್ನು ಸುಮಾರು ೧-೨ ಸಿ.ಸಿ. ಪ್ರಮಾಣದಲ್ಲಿ ತೆಗೆದುಕೊಂಡ ಕೈಗೆ ತಗಲುತ್ತಿರುವ ನಾರು ಜಂತಿನ ಜಾಗದಲ್ಲಿ ಚುಚ್ಚುಮದ್ದಾಗಿ ಕೊಡಬೇಕು. ಮತ್ತು ಉದ್ದವಾಗಿ ತೊಗಲನ್ನು ಆಳವಾಗಿ ಛೇದಿಸಿ ಜಂತನ್ನು ಹೊರತೆಗೆಯಬೇಕು. ಈ ಬಗೆಯ ಛೇದನ ನಡೆದಿರುವಾಗ ಚರ್ಮದ ಪದರು ಮುಂಗಿದು ಜೀವಕೋಶಗಳ ಭಾಗ ಸತ್ತುವುದು. ಆಗ ನೇರಛೇದಕ ಉಪಕರಣಕ್ಕೆ ಬದಲಾಗಿ ಮೊನಚಾಗಿರದ ಡೊಂಕು

ಉಪಕರಣ ಉಪಯೋಗಿಸುತ್ತ. ಚಿಮ್ಮಟಿಗೆಯಿಂದ ಚರ್ಮ
ವನ್ನು ಮೇಲಕ್ಕೆತ್ತಿ ಹಿಡಿದು ಅಲ್ಲಿ ಕಂಡು ಬರುವ ಶಾವಿಗೆಯ
ಎಳೆಯಂತೆ ಬಿಳುಪಾಗಿರುವ ನಾರು ಜಂತನ್ನು ಹಿಡಿದೆಳೆಯ
ಬೇಕು ಚಿಮ್ಮಟಿಗೆಯ ತುದಿಗೆ ಅಂಟಿಕೊಳ್ಳುವ ಈ ಜಂತನ್ನು
ಅತಿ ಸಾವಕಾಶವಾಗಿ ತೆಗೆಯುತ್ತ ಬರುವುದು ವಿಹಿತ ಶಕ್ತಿ
ಪ್ರಯೋಗ ಇಲ್ಲಿ ಪ್ರಯೋಜನಕಾರಿಯಲ್ಲ. ಒಂದೇ ಸಲಕ್ಕೆ
ಇಡೀ ಜಂತನ್ನು ಹೊರಕ್ಕೆಳೆಯುವುದು ಸಾಧ್ಯವಾಗದೆ ಇದ್ದಾಗ
ರೋಗಿಗೆ ತುಸು ತಿರುಗಾಡಲು ಹೇಳಬೇಕು; ೩-೪ ತಾಸು
ಗಳಾದ ಬಳಿಕ ನಾರುಜಂತು ಸಡಿಲುಗೊಂಡು ತೆಗೆಯಲು
ಸುಲಭವಾಗುವದು. ಈ ಕ್ರಮದಿಂದಲೂ ಜಂತನ್ನು ಹೊ
ತೆಗೆಯುವುದು ಒಬ್ಬನಿಗೆ ದುಸ್ಸಾಧ್ಯವಾದಾಗ ನಾರುಜಂತಿನ
ಮೇಲೆ ಎರಡನೆಯ ಅಥವಾ ಮೂರನೆಯ ಛೇದನ ಅವಶ್ಯ
ವಾಗುತ್ತದೆ. ಅಲ್ಲಿಂದ ಜಂತನ್ನು ಹೊರಗೆಳೆಯಬಹುದು
ಯಾವುದೇ ಕಾರಣದಿಂದ ನಾರುಜಂತು ಹರಿದುಕೊಂಡ
ಅಥವಾ ತುಂಡು ತುಂಡಾಗಿ ಸ್ವಲ್ಪ ಭಾಗ ಉಳಿದುಕೊಂಡಾ
ಸಿಕ್ಕಷ್ಟು ಭಾಗವನ್ನು ಹೊರಗೆಳೆದು ತೆಗೆಯಬೇಕು ಮತ್ತು
ಶಸ್ತ್ರಚಿಕಿತ್ಸೆ ಮುಗಿದ ತರುವಾಯ ರೋಗಿಗೆ ಕ್ರಿಮಿನಾಶ
ಮದ್ದು ಕೊಡುವುದು ಅತ್ಯವಶ್ಯ. ಏಕೆಂದರೆ ಮುಂದೊದಗು
ರೋಗ ಅಂಟುವಿಕೆಯನ್ನು ಇದು ತಪ್ಪಿಸುತ್ತದೆ.

೨) ರೋಗಿಯು ಚಿಕಿತ್ಸೆಗೆಂದು ಬಂದಾಗ ಈ ಬೇ
ಯೊಂದಿಗೆ ವೈತುರಿಕೆ, ವಾಂತಿ, ಜ್ವರ ಇಂಥ ಲಕ್ಷಣಗಳನ್ನು

ಹೊಂದಿದ್ದರೆ ಲಕ್ಷಣಕ್ಕನುಗುಣವಾಗಿ ಕೆಳಗಿನಂತೆ ಔಷಧೋಪಚಾರ ಬೇಕು.

i) ಜ್ವರನಿವಾರಕ ಹಾಗೂ ವೇದನಾಶಾಮಕ ಮದ್ದುಗಳಾದ ಆಸ್ಪಿರಿನ್ ಮಾತ್ರೆ, ಫೆನೆಸಿಟಿನ್, ಕೆಫಿನ್, ಫಿನಾಲ್ ಬುಟಾಝೋನ್ ಮಾತ್ರೆಗಳನ್ನು ಕೊಡುವುದು.

ii) ಎಂಟಿಸ್ಟಿನ್, ಸೈನಾಪೆನ್, ಎವಿಲ್‌ಗಳಂಥ ತುರಿಕೆ ಮತ್ತು ಕಡಿತಗಳನ್ನು ಗುಣಪಡಿಸುವ ಔಷಧಿ ಕೊಡುವುದು.

ನಾರಿನ ಶಸ್ತ್ರಕ್ರಿಯೆಯೊಡನೆ ರೋಗಿಗೆ ಮಾನಸಿಕ ಆಘಾತ ಉಂಟಾಗುವುದು ತೀರ ಕ್ವಚಿತ. ಒಂದು ವೇಳೆ ಹೀಗಾದರೆ ರೋಗಿಗೆ ೫% ಗ್ಲುಕೋಜ ಇರುವ ಕಾರ್ಟಿಝೋನ್ ಚುಚ್ಚು ಮದ್ದನ್ನು ಧಮನಿಗಳಲ್ಲಿ ಕೊಡಬೇಕು. ೧: ೧೦೦೦ದ ಒಂದು ಸಿ. ಸಿ. ಎಡ್ರಿನಾಲಿನ್ ಚುಚ್ಚುಮದ್ದನ್ನು ಕೊಡಬೇಕು.

iii) ಕುರ, ಹುಣ್ಣು ಮತ್ತು ರಂಧ್ರಯುಕ್ತ ವ್ರಣ ಮೊದಲಾದ ಲಕ್ಷಣಗಳಿಂದ ಕೂಡಿದ್ದು ಚೇತರಿಸಿಕೊಂಡಿರುವ ಈ ಬೇನೆಯನ್ನು ಶಸ್ತ್ರಭೇದನದಿಂದ ಕೀವು ಬಸಿಯುವಂತೆ ಮಾಡಬೇಕು. ರಂಧ್ರವಿರುವ ವ್ರಣವನ್ನು ಹರಿದು ಅಲ್ಲಿ ಬೆಳೆದಿರುವ ಅಂತರ್ಗತ ದುರ್ಮಾಂಸವನ್ನು ತೆಗೆಯಬೇಕು. ರೋಗದ ಸಾಂಕ್ರಾಮಿಕತೆಯನ್ನು ತಡೆಯಲು ಸ್ಟ್ರೆಪ್ಟೊಮಸಿನ್, ಟೆಟ್ರಾಸೈಕ್ಲಿನ್‌ಗಳಂಥ ಕ್ರಿಮಿನಾಶಕ ಔಷಧಿಗಳನ್ನು ರೋಗಿಗೆ ಕೊಡಬೇಕು.

iv) ಬೇನೆಯು ಅವಶೇಷ ಮತ್ತು ತೊಡಕುಗಳು:

(೧) ಕುರುಡುನಾರು ಪ್ರಕೋಪಗೊಳ್ಳುವುದುಂಟು.

(೨) ಮಂಡಿಯು ಸಂಧಿದ್ರವಪೂರಿ ಊತವಾಗುವದು.

(೩) ಕೊಳೆಯುವಿಕೆ ಮತ್ತು ದುರ್ಗಂಧ ಹೆಚ್ಚುವದು

(೪) ಹಿಮ್ಮಡದ ಕಾಲಿನ ಮೂಳೆಗಳಲ್ಲಿ ರಂಧ್ರಗಳಾಗುವವು.

ಈ ಮೇಲಿನ ತೊಡಕುಗಳು ಉಂಟಾದಾಗ ರೋಗಪೀಡಿತ ಭಾಗವನ್ನು ಕತ್ತರಿಸಿ ತೆಗೆಯಬೇಕು.

ಉಪಸಂಹಾರ

ನಾರು ಬೇನೆ ನಮ್ಮ ಭಾಗದ ಸರ್ವಸಾಧಾರಣ ಬೇನೆ-ಯಾಗಿದೆ. ಈ ಬೇನೆಯಿಂದ ಸಾವುಗಳಾಗಿರುವ ಉದಾಹರಣೆಗಳಿಲ್ಲವಾದರೂ ನಾರು ಜಂತು ತಿಂಗಳುಗಟ್ಟಲೆ ಮನುಷ್ಯನನ್ನು ಬಹಳ ಗೋಳಾಡಿಸುತ್ತವೆ ದೈನಂದಿನ ಕೆಲಸ ಮಾಡುವುದು ಅವನಿಗೆ ಸಾಧ್ಯವಾಗುವುದಿಲ್ಲ. ಕೆಲವು ಸಲ ಅಂಗವಿಕಲಗೊಳ್ಳುವ ಪ್ರಸಂಗಗಳೂ ಇರುತ್ತವೆ. ಈ ಬೇನೆಯ ಬಗ್ಗೆ ಜನಗಳಲ್ಲಿ ಇರುವ ತಾತ್ಸಾರ ಕಡಿಮೆಯಾದರೆ ರೋಗವನ್ನು ಪರಿ-ಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. ಜಾಗರೂಕತೆಯೂ ಅಷ್ಟೇನು ಕಷ್ಟದಾಯಕವಾಗಿರುವದಿಲ್ಲ. ಯಾವ ಹಳ್ಳಿಯಲ್ಲಾಗಲಿ ಹೊಕ್ಕು ತುಂಬುವ ಬಾವಿಗಳಿದ್ದರೆ ಅವನ್ನು ಮೊದಲು ಸೇದುವ ಬಾವಿಗಳನ್ನಾಗಿ ಪರಿವರ್ತಿಸಬೇಕು. ಸರ-ಕಾರದ ಸಹಾಯಕ್ಕಾಗಿ ಕಾಯದೆ ಜನಗಳು ಈ ಬಗ್ಗೆ ಬೇಗ ಜಾಗೃತರಾಗುವುದು ವಿಹಿತ. ಆರೋಗ್ಯ ಇಲಾಖೆಯವರೂ ಇತ್ತ ಗಮನಹರಿಸಿದರೆ ಜನಕ್ಕಾಗುವ ತೊಂದರೆ ದೂರವಾಗುವುದರಲ್ಲಿ ಸಂದೇಹವೇನಿದೆ ? ವೈದ್ಯಕೀಯ ಸೌಲಭ್ಯಗಳು ದೊರೆಯುತ್ತಿರುವ ಇಂದಿನ ಕಾಲದಲ್ಲಿ ನಾರು ಬೇನೆಯ ಬಗ್ಗೆ ಹೊಸ ಹೊಸ ಪ್ರಯೋಗಗಳು ನಡೆಯುತ್ತಲಿವೆ. ನಾವೂ ಈ ಬೇನೆಯನ್ನು ಕುರಿತು ವಿಶೇಷ ಗಮನಕೊಡುತ್ತಿರುವೆವು.

ಸಾಮಾನ್ಯ ಜನತೆಯನ್ನು ಬಹುವಾಗಿ ಕಾಡುತ್ತಿರುವ ನಾ
ಬೇನೆಯ ಬಗ್ಗೆ ಎಲ್ಲ ವೈದ್ಯರುಗಳ ಸಹಾನುಭೂತಿ. ಸಹಾ
ಅತ್ಯವಶ್ಯವಾಗಿದೆ.

ಮನುಷ್ಯನು ತನ್ನ ದೇಹವನ್ನು ರೋಗಗಳಿಂದ ಯಾ
ಗಲೂ ಮುಕ್ತವಾಗಿಡುವುದು ಬಹುಮುಖ್ಯ. ನಿರೋಗಸ್ಥಿತಿ
ಮನುಷ್ಯ ಜೀವನದ ಆನಂದಕ್ಕೆ ಮೂಲ. ಅದಕ್ಕಾಗಿಯೆ ಇಂಗ್ಲಿ
ಷಿನಲ್ಲಿ ಒಂದು ಗಾದೆ ಇದೆ, 'If wealth is lost nothi
is lost: If health is lost some thing is lost...
ಎಂದು. ಆರೋಗ್ಯ ಹೋದರೆ ಜೀವನ ಬೇಸರವಾಗುವುದ
ಅಂಥ ಬೇಸರದ ಜೀವನದಿಂದ ಮನುಷ್ಯನ ಪ್ರಗತಿ ಸಾಧ್ಯವೆ
ಅಂಥ ಮನುಷ್ಯರಿಂದ ಸಮಾಜದ, ದೇಶದ ಪ್ರಗತಿ ಸಾಧ್ಯವೆ
ದೇಶ ಪ್ರಗತಿಗೂ ವ್ಯಕ್ತಿಯ ಆರೋಗ್ಯವೇ ಮೂಲಶಕ್ತಿ. ನಾ
ಬೇನೆಯ ಬಗ್ಗೆ ಈ ಹಿಂದೆ ವಿವರಿಸಲಾಗಿರುವ ಕ್ರಮಗಳ
ಕೈಕೊಂಡರೆ ನಮ್ಮ ಜನ ಈ ರೋಗದಿಂದ ಮುಕ್ತರಾಗುವದ
ಬಹುಮಟ್ಟಿಗೆ ಸಾಧ್ಯವಿದೆ. ಇಲ್ಲಿ ನೀಡಲಾಗಿರುವ ಬೇನೆ
ಕಾರಣ, ಸ್ವರೂಪ, ತೀವ್ರತೆ ಹಾಗು ಉಪಚಾರಗಳ ವಿವ
ಗಳು ಸಾಮಾನ್ಯ ಜನಕ್ಕೆ ಉಪಯೋಗವಾದೀತೆಂದು ನಂಬು

———

ಈ ಮಾಲೆಯ ಇತ್ತೀಚಿನ ಪ್ರಕಟನೆಗಳು

ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾ ರ ವಾ ಡ